ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
BENGALURU CENTRAL UNIVERSITY
Central College Campus, Dr. B.R. AmbedkarVeedhi, Bengaluru – 560 001.
Ph. No.: 080 – 22131385, E-Mail:registrarbcu@gmail.com / bcuccb@gmail.com

ಸಂಖ್ಯೆ: ಬಿಸಿಯು/ಎಸ್‌ವೈಎನ್/ಸಾಮಾನ್ಯ ಸಭೆ–4/ 20/2019–20 ದಿನಾಂಕ: 30.10.2019.

ಗೆ,

ಸಿಂಡಿಕೇಟ್ ಸದಸ್ಯರು,
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ,
ಬೆಂಗಳೂರು

ಮಾನ್ಯರೆ

**ವಿಷಯ: ದಿನಾಂಕ: 19.10.2019 ರಂದು ಜರುಗಿದ 4ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು.**

***

ದಿನಾಂಕ: **19.10.2019** ರಂದು ಪೂರ್ವಾಹ್ನ 11–30 ಗಂಟೆಗೆ ಜರುಗಿದ 4ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು
30/10/19

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು–1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬಿಸಿಯು.
4. ಕಛೇರಿ ಪ್ರತಿ / ರಕ್ಷಣಾ ಕಡತ.

ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
BENGALURU CENTRAL UNIVERSITY
Central College Campus, Dr. B.R. AmbedkarVeedhi, Bengaluru – 560 001.
Ph. No.: 080 – 22131385, E-Mail:registrarbcu@gmail.com / bcuccb@gmail.com

ಸಂಖ್ಯೆ: ಬಿಸಿಯು/ಎಸ್‌ವೈಎನ್/ಸಾಮಾನ್ಯ ಸಭೆ/ 20 /2019-20 ದಿನಾಂಕ: 30.10.2019.

ದಿನಾಂಕ 19.10.2019 ರಂದು ಪೂರ್ವಾಹ್ನ 11.30 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಸಿಂಡಿಕೇಟ್ 4 ನೇ ಸಾಮಾನ್ಯ ಸಭೆಯ ನಡಾವಳಿಗಳು.

ಹಾಜರಾದ ಸದಸ್ಯರು:

| | | |
|---|---|---|
| 1. | ಪ್ರೊ: ಎಸ್. ಜಾಫೆಟ್,<br>ಕುಲಪತಿಗಳು | ಸಭಾಧ್ಯಕ್ಷರು |
| 2. | ಡಾ: ಎನ್. ನರಸಿಂಹಮೂರ್ತಿ | ಸದಸ್ಯರು |
| 3. | ಡಾ: ಅರವಿಂದ್ ಹೆಚ್.ಟಿ. | ಸದಸ್ಯರು |
| 4. | ಶ್ರೀ. ಹೆಚ್.ಆರ್. ಸತೀಶ್, | ಸದಸ್ಯರು |
| 5. | ಡಾ: ಶಾಂತಿ ರಾಜೇಂದ್ರ ಕುಮಾರ್, | ಸದಸ್ಯರು |
| 6. | ಡಾ: ಎಸ್. ಹರೀಶ್, | ಸದಸ್ಯರು |
| 7. | ಡಾ: ಆಶಾ ಗಣೇಶ್, | ಸದಸ್ಯರು |
| 8. | ಡಾ: ಲತಾಕುಮಾರಿ, | ಸದಸ್ಯರು |
| 9. | ಪ್ರೊ: ಎನ್. ಚಂದ್ರಪ್ಪ,<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 10. | ಪ್ರೊ: ವಿ. ಶಿವರಾಂ<br>ಕುಲಸಚಿವರು, | ಸದಸ್ಯ<br>ಕಾರ್ಯದರ್ಶಿಗಳು |

ಸಭೆಗೆ ಆಗಮಿಸಿದ ಎಲ್ಲ ಸದಸ್ಯರಿಗೆ ಹಾಗೂ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಅವರ ಪರವಾಗಿ ಆಗಮಿಸಿದ Mohamed Ziaulla Khan ಉಪನಿರ್ದೇಶಕರು ಇವರಿಗೆ ಕುಲಸಚಿವರು ಸ್ವಾಗತ ಕೋರಿದರು.

ಸದಸ್ಯರಾದ ಶ್ರೀ ಎಚ್.ಆರ್. ಸತೀಶ್ ಹಾಗೂ ಡಾ. ಅರವಿಂದ ಹೆಚ್.ಟಿ ರವರು ತಾವು ನಿಗದಿತ ದಿನಾಂಕ ಪೂರ್ವದಲ್ಲಿ ಸಲ್ಲಿಸಿರುವ

1. ಬೆಂಗಳೂರು ಮಿರರ್ ಪತ್ರಿಕೆಯಲ್ಲಿ ಪ್ರಕಟವಾದ Logysis ಸಂಸ್ಥೆಗೆ ಸಂಬಂಧಿಸಿದಂತೆ ವರದಿಯ ಕುರಿತು ಮತ್ತು

2. ವಿಶ್ವವಿದ್ಯಾಲಯದ "ಸೆನೆಟ್ ಹಾಲ್" ನ್ನು Secular Teachers Forum ನವರಿಗೆ ಸಭೆ ನಡೆಸಲು ನೀಡಿರುವ ಕುರಿತು 2 ವಿಷಯಗಳನ್ನು ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಲು ಸಲ್ಲಿಸಿದ್ದು ಅವು ಕಾರ್ಯಸೂಚಿಯಲ್ಲಿ ಸೇರಿಸದೇ ಇರುವ ಕುರಿತು ಆಕ್ಷೇಪ ವ್ಯಕ್ತಪಡಿಸಿ ಅವುಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಆಗ್ರಹಿಸಿದರು. ಕುಲಪತಿಗಳು ಈ ಕುರಿತು ಕುಲಸಚಿವರು ಮತ್ತು ಕುಲಸಚಿವರು (ಮೌಲ್ಯಮಾಪನ) ಅವರು ಸಭೆಗೆ ಮಾಹಿತಿ ನೀಡುವರು ಎಂದು ತಿಳಿಸಿದರು. ಅದಕ್ಕೆ ಸದಸ್ಯರು ಒಪ್ಪದೆ ಅಜಂಡಾದಲ್ಲಿ ಸೇರಿಸಬೇಕೆಂದು ಒತ್ತಾಯಿಸಿದರು. ಕುಲಪತಿಗಳು ಕಾರ್ಯಸೂಚಿಯ ಕೊನೆಯಲ್ಲಿ ಇವುಗಳನ್ನು ಸೇರಿಸಲಾಗುವುದು ಎಂದು ತಿಳಿಸಿದರು. ನಂತರ ಕಾರ್ಯಸೂಚಿಯನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು

| | |
|---|---|
| ವಿಷಯ ಸಂಖ್ಯೆ– 1: | ದಿನಾಂಕ 23.08.2019 ರಂದು ಜರುಗಿದ 3ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿನ್ನು ಧೃಢೀಕರಿಸುವ ಕುರಿತು.<br>ಸಿಂಡಿಕೇಟ್ ನಿರ್ಣಯ:<br>ದಿನಾಂಕ **23.08.2019** ರಂದು ಜರುಗಿದ ಸಿಂಡಿಕೇಟ್ 3ನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ಧೃಢೀಕರಿಸಲಾಯಿತು. |
| ವಿಷಯ ಸಂಖ್ಯೆ–2: | ದಿನಾಂಕ 23.08.2019 ರಂದು ಜರುಗಿದ 3ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಯ ಮೇಲೆ ಕೈಕೊಂಡ ಕ್ರಮದ ವರದಿ<br>ಸಿಂಡಿಕೇಟ್ ನಿರ್ಣಯ:<br>ದಿನಾಂಕ **23.08.2019** ರ ಸಿಂಡಿಕೇಟ್ ಸಭೆಯ ನಡಾವಳಿಗಳ ಮೇಲೆ ಕೈಕೊಂಡ ಕ್ರಮದ ವರದಿಯ ಮೇಲೆ ಕೆಳಗೆ ನಮೂದಿಸಿದ ಸೂಚನೆಗಳೊಂದಿಗೆ ಅನುಮೋದಿಸಲಾಯಿತು<br>ಅ. 70 ವರ್ಷ ಪೂರೈಸಿರುವ ನಿವೃತ್ತ ಅಧಿಕಾರಿ / ಸಿಬ್ಬಂದಿಗಳನ್ನು ಇನ್ನು 2 ತಿಂಗಳು ಮುಂದುವರೆಸಿ ಅವರನ್ನು ವಿಶ್ವವಿದ್ಯಾಲಯದ ಸೇವೆಯಿಂದ ಬಿಡುಗಡೆ ಮಾಡಬೇಕೆಂದು ತೀರ್ಮಾನಿಸಲಾಯಿತು.<br>ಆ. ಇತಿಹಾಸ ಆಂಗ್ಲ ಹಾಗೂ ಕನ್ನಡ ವಿಭಾಗದ ಸಂಯೋಜಕರನ್ನು ದಿನಾಂಕ: 1.10.2019 ರಿಂದ ಸೇವೆಯಿಂದ ಬಿಡುಗಡೆ ಮಾಡಲಾಗಿದೆ ಎಂದು ನಮೂದಿಸಿರುವ ಕುರಿತು ಸದಸ್ಯರಾದ ಡಾ: ಹೆಚ್.ಟಿ. ಅರವಿಂದರವರು, ಡಾ. ಕೆ.ವೈ.ನಾರಾಯಣಸ್ವಾಮಿಯವರನ್ನು ವಿಶ್ವವಿದ್ಯಾಲಯದ ನಿಯೋಜನಾ ಸೇವೆಯಿಂದ ಈ ದಿನಾಂಕದ ಪೂರ್ವದಲ್ಲಿ ಬಿಡುಗಡೆ ಮಾಡಲಾಗಿರುವುದರಿಂದ 1.10.2019ಕ್ಕೆ ಬಿಡುಗಡೆಗೊಳಿಸುವ ಪ್ರಮೇಯ ಬರುವುದಿಲ್ಲವೆಂದು ತಿಳಿಸಿದರು. ಸದರಿಯವರು ನಿಯೋಜನೆ ಸೇವೆಯಿಂದ ಬಿಡುಗಡೆಯಾದ ನಂತರ ಗೌರವ ಸಂಯೋಜಕರೆಂದು ಕಾರ್ಯನಿರ್ವಹಿಸಿದ್ದು, ಈ ಸೇವೆಯಿಂದ 1.10.2019 ರಂದು ಬಿಡುಗಡೆ ಮಾಡಲಾಗಿದೆ ಎಂದು ವಿವರಿಸಿದರು.<br>ಇ. ವಿಶ್ವವಿದ್ಯಾಲಯದ ಲೆಕ್ಕ ಪತ್ರಗಳ ಲೆಕ್ಕ ಪರಿಶೋಧನೆ ಮಾಡಲು ಕ್ರಮ ಕೈಕೊಳ್ಳಬೇಕೆಂದು ಸೂಚಿಸಲಾಯಿತು<br>ಈ. ಕ್ಯಾಟೀನ್ ಕಟ್ಟಡ ಕಟ್ಟುವ ಸಲುವಾಗಿ ಸಂಬಂಧಿಸಿದ ರಾಜ್ಯಸಭಾ ಸದಸ್ಯರಿಗೆ ಹಾಗೂ ಲೋಕಸಭಾ ಸದಸ್ಯರಿಗೆ ಕುಲಪತಿಗಳು ಪತ್ರ ಬರೆಯ ಬೇಕೆಂದು ಅದರ ಪ್ರತಿಯನ್ನು ಸದಸ್ಯರಾದ ಶ್ರೀ ಹೆಚ್.ಆರ್. ಸತೀಶ್ ರವರಿಗೆ ಅನುದಾನ ಬಿಡುಗಡೆಗಾಗಿ ಪ್ರಯತ್ನಿಸಲು ನೀಡಬೇಕೆಂದು ತಿಳಿಸಲಾಯಿತು. |

ಉ. Indian Social Science Congress ಗೆ ಸಂಬಂಧಿಸಿದಂತೆ ಜರುಗಿದ ಚಟುವಟಿಕೆ / ಸಭೆಗಳ ಕುರಿತು ವಿವರಗಳನ್ನು ಕುಲಪತಿಗಳು ನೀಡಿದರು. ಈ ಕುರಿತು ಕಾರ್ಯಕ್ರಮಗಳನ್ನು ರೂಪಿಸಲು ಹಾಗೂ ಅವುಗಳಿಗೆ ಸಂಬಂಧಿಸಿದಂತೆ ಖರ್ಚು ವೆಚ್ಚಗಳನ್ನು ನಿರ್ವಹಿಸಲು ಮೂಲಧನ (seed money) ರೂ.10.00 ಲಕ್ಷಗಳನ್ನು ಬಿಡುಗಡೆ ಮಾಡಲು ಮತ್ತು ತಾತ್ಕಾಲಿಕ ಕಛೇರಿ ಹಾಗೂ ಸಿಬ್ಬಂದಿಗಳನ್ನು ಒದಗಿಸ ಬೇಕಾಗಿದೆ ಎಂದು ಕುಲಪತಿಗಳು ಪ್ರಸ್ತಾಪಿಸಿದರು.

ಸಿಂಡಿಕೇಟ್ ನಿರ್ಣಯ:

ಸಿಂಡಿಕೇಟ್ ಸಭೆ ಪ್ರಸ್ತಾವನೆಗೆ ಒಪ್ಪಿಗೆ ಸೂಚಿಸಿ, 43ನೇ Indian Social Science Congress ಆಯೋಜನೆ ಕುರಿತಂತೆ ಕಾರ್ಯಕ್ರಮಗಳನ್ನು ರೂಪಿಸಲು ಹಾಗೂ ಅವುಗಳಿಗೆ ಸಂಬಂಧಿಸಿದಂತೆ ಖರ್ಚು ವೆಚ್ಚಗಳನ್ನು ನಿರ್ವಹಿಸಲು ವಿಶ್ವವಿದ್ಯಾಲಯದ ಆಯವ್ಯಯದಲ್ಲಿ "033 ಸಮ್ಮೇಳನಗಳು, ವಿಚಾರ ಸಂಕಿರಣಗಳು, ಕಾರ್ಯಗಾರಗಳ ವೆಚ್ಚಗಳು, ಇತ್ಯಾದಿ" ಲೆಕ್ಕ ಶೀರ್ಷಿಕೆಯಿಂದ ರೂ.10.00 ಲಕ್ಷಗಳನ್ನು ಮೂಲಧನವಾಗಿ ಬಿಡುಗಡೆ ಮಾಡಲು ಹಾಗೂ ಈಗಾಗಲೆ ದಿನಾಂಕ 23.08.2019 ರ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಬ್ಯಾಂಕ್ ಖಾತೆ ತೆರೆಯಬೇಕೆಂದು ತೀರ್ಮಾನಿಸಲಾಯಿತು. ಮತ್ತು ತಾತ್ಕಾಲಿಕ ಕಛೇರಿ ಹಾಗೂ ಸಿಬ್ಬಂದಿಗಳನ್ನು ಒದಗಿಸಲು ಅನುಮತಿ ನೀಡಲಾಯಿತು.

ಅಗತ್ಯ ಅನುದಾನ ನೀಡಲು ಸರ್ಕಾರಕ್ಕೆ ಹಾಗೂ ಮಹಾವಿದ್ಯಾಲಯಗಳಿಗೆ ಧನಸಹಾಯ ನೀಡಲು ಮತ್ತು ಕೆಲವು ಕಾರ್ಯಕ್ರಮಗಳ ಪ್ರಾಯೋಜಕತ್ವ ವಹಿಸಲು ವಿನಂತಿಸಿ Indian Social Science Congress ಸಂಘಟನಾ ಸಮಿತಿ ವತಿಯಿಂದ ಪತ್ರ ಬರೆಯಬೇಕೆಂದು ತೀರ್ಮಾನಿಸಲಾಯಿತು.

ಊ. ವಾಣಿಜ್ಯ ವಿಭಾಗದ ಪ್ರಾಧ್ಯಾಪಕರಾದ ಡಾ. ಎಂ. ಮುನಿನಾರಾಯಣಪ್ಪ ರವರಿಗೆ ಕೊಠಡಿ ನೀಡುವ ಹಾಗೂ ಇನ್ನಿತರ ವಿಷಯಗಳ ಕುರಿತು ಸೂಕ್ತ ಕ್ರಮ ಕೈಕೊಳ್ಳಲಾಗುವುದು ಎಂದು ತಿಳಿಸಲಾಯಿತು ಪರಿಶೀಲನೆ ಮಾಡಿ ವರದಿ ಸಲ್ಲಿಸಲು ನಿವೃತ್ತ ಕುಲಪತಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗುವುದೆಂದು ಸಭೆಗೆ ತಿಳಿಸಲಾಯಿತು.

**ವಿಷಯ ಸಂಖ್ಯೆ–3:** ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಆದೇಶ ದಿನಾಂಕ 22.07.2019 ರ ಪ್ರಕಾರ ತಾತ್ಕಾಲಿಕವಾಗಿ ಸಂಚಿತ ಸಂಭಾವನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ನೌಕರರ ಸೇವೆಯನ್ನು ಮುಂದುವರೆಸುವ ಬಗ್ಗೆ

ಸದಸ್ಯರಾದ ಶ್ರೀ ಡಾ. ಎಚ್.ಟಿ ಅರವಿಂದ ರವರು 70 ವರ್ಷ ವಯಸ್ಸು ಪೂರ್ಣಗೊಳಿಸಿರುವ ನಿವೃತ್ತ ಸಿಬ್ಬಂದಿಗಳ ಸೇವೆ ಮುಂದುವರೆಸುವ ಕುರಿತು ವಿಷಯ ಸಂಖ್ಯೆ 2 (ಅ) ದಲ್ಲಿ ತೀರ್ಮಾನಿಸಿದಂತೆ 2 ತಿಂಗಳು ಮುಂದುವರೆಸಿ, ಸೇವೆ ಬಿಟ್ಟು ಹೋಗಿರುವವರನ್ನು ಹೊರತುಪಡಿಸಿ ಉಳಿದ ಸಿಬ್ಬಂದಿಗಳ ಸೇವೆಯನ್ನು 3 ತಿಂಗಳ ಅವಧಿಗೆ ವಿಸ್ತರಿಸಬಹುದೆಂದು ತಿಳಿಸಿದರು.

ಡಾ. ಎನ್. ನರಸಿಂಹಮೂರ್ತಿಯವರು 4 ಜನ ವಿಶೇಷಾಧಿಕಾರಿಗಳಿಗೆ ಬೇರೆ ಬೇರೆಯಾದ ವೇತನ ನೀಡುತ್ತಿರುವುದು ಕುರಿತು ಹಾಗೂ ಗ್ರಂಥಪಾಲಕರು ಮುತ್ತು ದೈಹಿಕ ಶಿಕ್ಷಣ ನಿರ್ದೇಶಕರ ಹುದ್ದೆಗಳು ಪ್ರಾಧ್ಯಾಪಕರ ಹುದ್ದೆಗೆ ಸಮವಾಗಿರುವುದರಿಂದ ಅವರಿಗೆ ನೀಡಲಾಗುತ್ತಿರುವ ವೇತನವನ್ನು ಸರಿಪಡಿಸಬೇಕೆಂದು ತಿಳಿಸಿದರು.

ಸಿಂಡಿಕೇಟ್ ನಿರ್ಣಯ:

ಚರ್ಚೆಯ ನಂತರ 70 ವರ್ಷ ವಯಸ್ಸು ಪೂರ್ಣಗೊಳಿಸಿರುವ ನಿವೃತ್ತ ಸಿಬ್ಬಂದಿಗಳ ಸೇವೆ 2 ತಿಂಗಳ ಅವಧಿಗೆ ಹಾಗೂ ಉಳಿದ ನಿವೃತ್ತ ಸಿಬ್ಬಂದಿಗಳ ಸೇವೆಯನ್ನು 3 ತಿಂಗಳ ಅವಧಿಗೆ ವಿಸ್ತರಿಸಲು ತೀರ್ಮಾನಿಸಲಾಯಿತು.

| | |
|---|---|
| ವಿಷಯ ಸಂಖ್ಯೆ–4: | Recognition of Post Graduate Department of the affiliated Colleges / Laboratories / Institutes, coming under the University, as Research Centre to carry out Research programme in their respective subjects from the year 2020-2021<br><br>ಸಿಂಡಿಕೇಟ್ ನಿರ್ಣಯ:<br>ಪ್ರಸ್ತಾವನೆಗೆ ಅನುಮೊದನೆ ನೀಡಿ ಹೊಸ ಸಂಶೋಧನಾ ಕೇಂದ್ರಗಳಿಗೆ ಮಾನ್ಯತೆ ನೀಡಲು ಪ್ರತಿ ವಿಷಯಕ್ಕೆ ಶುಲ್ಕ ರೂ.82,500/– ಹಾಗೂ ಅರ್ಜಿ ಶುಲ್ಕ ಪ್ರತಿ ವಿಷಯಕ್ಕೆ ರೂ.1,100/– ಗಳನ್ನು ನಿಗದಿ ಪಡಿಸಲು ಅನುಮತಿ ನೀಡಲಾಯಿತು.<br><br>ಹಾಲಿ ಇರುವ ಸಂಶೋಧನಾ ಕೇಂದ್ರಗಳ ನವೀಕರಣಕ್ಕಾಗಿ ರಚಿಸಲಾದ ಸಮಿತಿಗಳು ಕೂಡಲೇ ಸಂಶೋಧನಾ ಕೇಂದ್ರಗಳಿಗೆ ಬೇಟನೀಡಿ ನವೀಕರಣ ಕುರಿತು ವರದಿ ಸಲ್ಲಿಸಲು ಸೂಚಿಸಲಾಯಿತು.<br><br>**Ph.D** ಪ್ರವೇಶ ಪ್ರಕ್ರಿಯೆ ಆದಷ್ಟು ಬೇಗ ಪ್ರಾರಂಭಿಸಬೇಕೆಂದು ಸೂಚಿಸಲಾಯಿತು. |
| ವಿಷಯ ಸಂಖ್ಯೆ–5: | ಎಂ.ಎಸ್ಸಿ ಸಸ್ಯ ವಿಜ್ಞಾನ ಹಾಗೂ ಪ್ರಾಣಿ ವಿಜ್ಞಾನ ಅಧ್ಯಯನ ಮಂಡಳಿಗಳನ್ನು ರಚಿಸಿರುವ ಕ್ರಮದ ಘಟನೋತ್ತರ ಅನುಮೋದನೆ ಕುರಿತು<br>ಸಿಂಡಿಕೇಟ್ ನಿರ್ಣಯ:<br>ಸಸ್ಯ ವಿಜ್ಞಾನ ಹಾಗೂ ಪ್ರಾಣಿ ವಿಜ್ಞಾನ ಸನ್ನಾತಕೋತ್ತರ ಅಧ್ಯಯನ ಮಂಡಳಿ ರಚನೆಗೆ ಘಟನೋತ್ತರ ಅನುಮೋದನೆ ನೀಡಲಾಯಿತು. |
| ವಿಷಯ ಸಂಖ್ಯೆ–6: | ದೈಹಿಕ ಶಿಕ್ಷಣ ಸ್ನಾತಕ ಅಧ್ಯಯನ ಮಂಡಳಿಯ ಅಧ್ಯಕ್ಷರನ್ನು ನೇಮಕ ಮಾಡಿರುವ ಕ್ರಮದ ಘಟನೋತ್ತರ ಅನುಮೋದನೆ ಕುರಿತು<br><br>ಸಿಂಡಿಕೇಟ್ ನಿರ್ಣಯ:<br>ಶ್ರೀ ಕೆ.ಕೆ. ಅಮರನಾಥ ಸಹ ಪ್ರಾಧ್ಯಾಪಕರು ವಿಶ್ವವಿದ್ಯಾಲಯ ದೈಹಿಕ ಶಿಕ್ಷಣ ಮಹಾವಿದ್ಯಾಲಯ ಇವರನ್ನು ಸ್ನಾತಕ ದೈಹಿಕ ಶಿಕ್ಷಣ ಅಧ್ಯಯನ ಮಂಡಳಿ ಅಧ್ಯಕ್ಷರಾಗಿ ನೇಮಕ ಮಾಡಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು. |
| ವಿಷಯ ಸಂಖ್ಯೆ–7: | Ratification of constitution of Board of Studies in Criminology (UG) for Bengaluru Central University<br><br>ಸದಸ್ಯರಾದ ಡಾ. ಹಚ್.ಟಿ ಅರವಿಂದರವರು ಡಾ. ಸತೀಶ್‌ಗೌಡ ಅವರು ಸಹಾಯಕ ಪ್ರಾಧ್ಯಾಪಕರಾಗಿದ್ದು Criminology ವಿಷಯದಲ್ಲಿ ಪರಿಣಿತಿ ಹೊಂದಿರುವುದಿಲ್ಲವೆಂದು ತಿಳಿಸಿ ಅವರ ಸ್ಥಾನದಲ್ಲಿ ಡಾ. ವಿ ಸುದೇಶ್, ಡೀನ್, ಕಾನೂನು ನಿಕಾಯ, ಬೆಂಗಳೂರು ವಿಶ್ವವಿದ್ಯಾಲಯ ಇವರನ್ನು ಅಧ್ಯಕ್ಷರಾಗಿ ನೇಮಿಸಿ, ಡಾ. ಸತೀಶ್‌ಗೌಡರನ್ನು ಸದಸ್ಯರಾಗಿ ನೇಮಕ ಮಾಡಬೇಕೆಂದು ಹಾಗೂ ವಿಷಯದಲ್ಲಿ ಪರಿಣಿತಿ ಹೊಂದಿರುವ ಇನ್ನೊಬ್ಬರನ್ನು ಸದಸ್ಯರಾಗಿ ನೇಮಕ ಮಾಡಲು ತಿಳಿಸಿದರು.<br><br>ಸಿಂಡಿಕೇಟ್ ನಿರ್ಣಯ:<br>ಚರ್ಚೆಯ ನಂತರ, ಡಾ. ವಿ ಸುದೇಶ್, ಡೀನ್, ಕಾನೂನು ನಿಕಾಯ, ಬೆಂಗಳೂರು ವಿಶ್ವವಿದ್ಯಾಲಯ ರವರನ್ನು ಅಧ್ಯಕ್ಷರಾಗಿ ಹಾಗೂ ಡಾ. ಸತೀಶ್‌ಗೌಡರವರನ್ನು ಸದಸ್ಯರಾಗಿ ಹಾಗೂ Criminology ವಿಷಯಕ್ಕೆ ಸಂಬಂಧಿಸಿದ ಒಬ್ಬ ಅಧ್ಯಾಪಕರನ್ನು ಸದಸ್ಯರಾಗಿ ನೇಮಕ ಮಾಡಿ ಅಧ್ಯಯನ ಮಂಡಳಿ ಪುನರ್ ರಚಿಸಲು ತೀರ್ಮಾನಿಸಲಾಯಿತು. |

| | |
|---|---|
| ವಿಷಯ ಸಂಖ್ಯೆ–8: | Ratification of constitution of Board of Studies in Mass Communication & Journalism (PG) for Bengaluru Central University<br><br>ಸಿಂಡಿಕೇಟ್ ನಿರ್ಣಯ:<br>ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ (**Mass Communication & Jounalism)** ಸ್ನಾತಕೋತ್ತರ ಅಧ್ಯಯನ ಮಂಡಳಿ ರಚನೆಗೆ ಘಟನೋತ್ತರ ಅನುಮೋದನೆ ನೀಡಲಾಯಿತು. |
| ವಿಷಯ ಸಂಖ್ಯೆ–9: | Ratification of appointment of Chairperson of the Board of Studies in Sanskrit (UG)<br><br>ಸಿಂಡಿಕೇಟ್ ನಿರ್ಣಯ:<br>ಡಾ. ಪಂಕಜ ನಯನ, ಸಹ ಪ್ರಾಧ್ಯಾಪಕರು **NMKRV** ಮಹಿಳಾ ಮಹಾವಿದ್ಯಾಲಯ ಇವರನ್ನು ಸಂಸ್ಕೃತ ಸ್ನಾತಕ ಅಧ್ಯಯನ ಮಂಡಳಿ ಅಧ್ಯಕ್ಷರಾಗಿ ನೇಮಕ ಮಾಡಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು. |
| ವಿಷಯ ಸಂಖ್ಯೆ–10: | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ವಿವಿಧ ವಿಭಾಗ / ಕಛೇರಿಗಳಲ್ಲಿ ತಾತ್ಕಾಲಿಕವಾಗಿ ಸಂಚಿತ ಸಂಭಾವನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರ ಸೇವೆಯನ್ನು ಮುಂದುವರೆಸುವ ಬಗ್ಗೆ<br><br>ಕಳೆದ ಸಿಂಡಿಕೇಟ್ ಸಭೆಯಲ್ಲಿ ಈ ಕುರಿತು ಚರ್ಚಿಸಿ ಸಂಚಿತ ವೇತನ ಸಿಬ್ಬಂದಿಗಳಿಗೆ ಭವಿಷ್ಯನಿಧಿ ESI ಇತ್ಯಾದಿ ಸೌಲಭ್ಯ ನೀಡಲು ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಪಡೆಯುವ ಕುರಿತು ಪರಿಶೀಲಿಸಲು ಒಂದು ಸಮಿತಿ ರಚಿಸಲಾಗಿತ್ತು, ಈ ಕುರಿತು ಮಾಹಿತಿ ನೀಡಬೇಕೆಂದು ಸದಸ್ಯರಾದ ಡಾ. ಅರವಿಂದ ಹೆಚ್.ಟಿ. ಅವರು ತಿಳಿಸಿದರು.<br>ಕುಲಪತಿಗಳು ವಿವರಣೆ ನೀಡುತ್ತಾ ಸಮಿತಿಯ ವರದಿಯ ಪ್ರಕಾರ, ಮಾನವ ಸಂಪನ್ಮೂಲ ಸಂಸ್ಥೆಗಳ ಮುಖಾಂತರ ಸಿಬ್ಬಂದಿಗಳ ಸೇವೆ ಪಡೆಯಲು ಶಿಫಾರಸ್ಸು ಮಾಡಿರುತ್ತಾರೆ. ಶಾಸನಬದ್ಧವಾಗಿ ಪಾವತಿಸಬೇಕಾದ ಭವಿಷ್ಯನಿಧಿ ಹಾಗೂ ESI ವಂತಿಗೆಗಳನ್ನು ವಿಶ್ವವಿದ್ಯಾಲಯ ಪಾವತಿಸಿ ಇವರನ್ನು ಮುಂದುವರೆಸುವ ಅಥವಾ ಮಾನವ ಸಂಪನ್ಮೂಲ ಸಂಸ್ಥೆ ಮುಖಾಂತರ ಸೇವೆ ಪಡೆಯುವ ಕುರಿತು ಮತ್ತು ಈ ಸಿಬ್ಬಂದಿಗಳ ವೇತನದ ಮೊತ್ತವನ್ನು ಸರ್ಕಾರದಿಂದ ಅನುದಾನದ ರೂಪದಲ್ಲಿ ಪಡೆಯುವ ಸಾಧ್ಯತೆಯನ್ನು ಪರಿಶೀಲಿಸಲು ವಿಷಯವನ್ನು ಹಣಕಾಸು ಸಮಿತಿ ಮುಂದೆ ಮಂಡಿಸಿ ಅದರ ತೀರ್ಮಾನದ ಪ್ರಕಾರ ಕ್ರಮ ಕೈಕೊಳ್ಳಲಾಗುವುದೆಂದು ತಿಳಿಸಿದರು. ಈ ಸಭೆಗೆ ಒಬ್ಬ ಕಾರ್ಮಿಕ ಕಾನೂನು ತಜ್ಞರನ್ನು ಆಹ್ವಾನಿಸಲಾಗುವುದೆಂದು ತಿಳಿಸಿದರು.<br><br>ಸಿಂಡಿಕೇಟ್ ನಿರ್ಣಯ:<br>ಪ್ರಸ್ತಾಪಿಸಿದಂತೆ ಹಣಕಾಸು ಸಮಿತಿ ಸಭೆ ಕರೆದು ಸಭೆಯ ಶಿಫಾರಸ್ಸನ್ನು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಬೇಕೆಂದು ಸೂಚಿಸಿ, ಒಂದು ತಿಂಗಳ ಅವಧಿಗೆ ಪ್ರಸ್ತಾವನೆಯಲ್ಲಿ ನಮೂದಿಸಿರುವ 56 ಜನ ಸಂಚಿತ ವೇತನ ಸಿಬ್ಬಂದಿಗಳ ಸೇವೆಯನ್ನು ಮುಂದುವರೆಸಲು ತೀರ್ಮಾನಿಸಲಾಯಿತು. |
| ವಿಷಯ ಸಂಖ್ಯೆ–11: | ಶ್ರೀ ನಾರಾಯಣಸ್ವಾಮಿ ಅವರನ್ನು ತೋಟಗಾರಿಕೆ ಸಲಹೆಗಾರರಾಗಿ ನೇಮಕಾತಿ ಮಾಡಿರುವುದನ್ನು ಮುಂದುವರೆಸುವ ಬಗ್ಗೆ<br><br>ಸಿಂಡಿಕೇಟ್ ನಿರ್ಣಯ:<br>ಶ್ರೀ ನಾರಾಯಣ ಸ್ವಾಮಿಯವರನ್ನು 1.7.2019 ರಿಂದ 31.12.2019 ವರೆಗೆ ಮುಂದುವರೆಸಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು. |

| | |
|---|---|
| ವಿಷಯ ಸಂಖ್ಯೆ–12: | ಪೂರ್ಣಾವಧಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಸಂಭಾವನೆ ಹೆಚ್ಚಿಸುವ ಬಗ್ಗೆ<br><br>ಸಿಂಡಿಕೇಟ್ ನಿರ್ಣಯ:<br><br>ಚರ್ಚೆಯ ನಂತರ 2019–20 ನೇ ಶೈಕ್ಷಣಿಕ ಸಾಲಿನಿಂದ ಕೆಳಗೆ ನಮೂದಿಸಿದಂತೆ ಸಂಭಾವನೆಯನ್ನು ಹೆಚ್ಚಿಸಲು ತೀರ್ಮಾನಿಸಲಾಯಿತು.<br>1. ಪ್ರಸ್ತುತ 1 ಗಂಟೆ ಬೋಧನೆ ಅವಧಿಗೆ ನೀಡುತ್ತಿರುವ ರೂ.1,000/– ಸಂಭಾವನೆಯನ್ನು ರೂ.1250/– ಕ್ಕೆ ಹೆಚ್ಚಿಸಲು ತಿಂಗಳಿಗೆ ಗರಿಷ್ಠ ರೂ.50,000/–.<br>2. ಸ್ನಾತಕೋತ್ತರ ಪದವಿ ಮಾತ್ರ ಹೊಂದಿರುವ ಅತಿಥಿ ಉಪನ್ಯಾಸಕರಿಗೆ 1 ಗಂಟೆ ಬೋಧನಾ ಅವಧಿಗೆ ಪ್ರಸ್ತುತ ನೀಡುತ್ತಿರುವ ರೂ.600/–ರ ಸಂಭಾವನೆಯನ್ನು ರೂ.750/– ಕ್ಕೆ ಹೆಚ್ಚಿಸಲು ತಿಂಗಳಿಗೆ ಗರಿಷ್ಠ ರೂ.40,000/–. |
| ವಿಷಯ ಸಂಖ್ಯೆ–13: | 23.08.2019ರ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಬೋಧಕೇತರ ನೌಕರರ ಮುಂಬಡ್ತಿ ನೀಡುವ ಬಗ್ಗೆ<br><br>ಸಿಂಡಿಕೇಟ್ ನಿರ್ಣಯ:<br>ಈ ಕುರಿತು Article 371(j) ಮತ್ತು, ಮುಂಬಡ್ತಿಗಾಗಿ ಗುರುತಿಸಲಾದ ಹುದ್ದೆಗಳ ಮೀಸಲಾತಿ ಹಾಗೂ ಅಧೀಕ್ಷಕರ ಹುದ್ದೆಯನ್ನು ಪರಿಗಣಿಸಿ ಹಿರಿಯ ಸಹಾಯಕರ ಹುದ್ದೆಗೆ ಬಡ್ತಿ ನೀಡುವ ಅಥವಾ ಸಹಾಯಕರ ಹುದ್ದೆ ಉನ್ನತೀಕರಿಸುದರ ಕುರಿತು ನಿಯಮಾನುಸಾರ ಪರಿಶೀಲಿಸಿ, ಅರ್ಹರಾದ ಸಿಬ್ಬಂದಿಗಳಿಗೆ ಬಡ್ತಿ ನೀಡುವ ಕುರಿತು ಶಿಫಾರಸ್ಸು ಮಾಡಲು ಕುಲಸಚಿವರ ಅಧ್ಯಕ್ಷತೆಯಲ್ಲಿ, ಕುಲಸಚಿವರು (ಮೌಲ್ಯಮಾಪನ) ಮತ್ತು ಹಣಕಾಸು ಅಧಿಕಾರಿಗಳನ್ನು ಒಳಗೊಂಡ ಸಮಿತಿ ರಚಿಸಲು ತೀರ್ಮಾನಿಸಲಾಯಿತು. ಸದರಿ ಸಮಿತಿ ಒಂದು ವಾರದ ಅವಧಿಯಲ್ಲಿ ವರದಿಯನ್ನು ಸಲ್ಲಿಸಬೇಕೆಂದು ಆ ವರದಿಯ ಆಧಾರದ ಮೇಲೆ ಕುಲಪತಿಗಳು ಅಗತ್ಯ ಕ್ರಮ ಕೈಕೊಂಡು ಸಿಂಡಿಕೇಟ್ ಸಭೆಗೆ ವರದಿ ಮಾಡಬೇಕೆಂದು ತೀರ್ಮಾನಿಸಲಾಯಿತು. |
| ವಿಷಯ ಸಂಖ್ಯೆ–14: | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ವಿವಿಧ ವಿಭಾಗ / ಕಛೇರಿಗಳಿಗೆ ಬೇಕಾಗಿರುವ ಮಾನವ ಸಂಪನ್ಮೂಲ ಸೇವೆಯ ಅಧ್ಯಯನದ ಬಗ್ಗೆ ರಚಿಸಲಾದ ಸಮಿತಿಯ ವರದಿಯ ಬಗ್ಗೆ<br><br>ಸಿಂಡಿಕೇಟ್ ನಿರ್ಣಯ:<br>ವಿಷಯ ಸಂಖ್ಯೆ 10 ರಲ್ಲಿ ತೀರ್ಮಾನಿಸಿದಂತೆ. |
| ವಿಷಯ ಸಂಖ್ಯೆ–15 | ಶ್ರೀ ಶಿವಶಂಕರ ಭೈರವ, ಸಹಾಯಕ (ಅಮಾನತ್ತು) ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ದೋಷರೋಪ ಪಟ್ಟಿಗಳನ್ನು ಅನುಮೋದಿಸುವ ಬಗ್ಗೆ<br>ಸಿಂಡಿಕೇಟ್ ನಿರ್ಣಯ:<br>ಅ) ಶ್ರೀ ಶಿವಶಂಕರ ಭೈರವ, ಸಹಾಯಕ ಇವರನ್ನು ವಿಶ್ವವಿದ್ಯಾಲಯದ ಸೇವೆಯಿಂದ ಅಮಾನತ್ತುಗೊಳಿಸಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು.<br><br>ಆ) ಸದರಿ ಅಮಾನತ್ತುಗೊಂಡಿರುವ ಸಿಬ್ಬಂದಿಯ ವಿರುದ್ಧ ನಿರ್ದಿಷ್ಟ ಅಪಾದನೆಗಳ ಪಟ್ಟಿ (Article of charges) ಜಾರಿಗೋಳಿಸಿ ಕಾರಣ ಕೇಳುವ ಸೂಚನಾ ಪತ್ರವನ್ನು ನೀಡಲು ಅನುಮೋದನೆ ನೀಡಲಾಯಿತು.<br><br>ಈ ಕುರಿತು ಕುಲಸಚಿವರು ಕಾನೂನು ಸಲಹೆಗಾರರ ಅಭಿಪ್ರಾಯದಂತೆ ಮುಂದಿನ ಕ್ರಮ ಕೈಕೊಳ್ಳಬೇಕೆಂದು ತೀರ್ಮಾನಿಸಲಾಯಿತು. |

| | |
|---|---|
| ವಿಷಯ ಸಂಖ್ಯೆ –16 | ಪ್ರೀತು ಬಿ.ಎಂ ಎರಡನೇ ಸೆಮಿಸ್ಟರ್ ಬಿ.ಸಿ.ಎ, SSMRV ಕಾಲೇಜು ಇವರ Non-Core ವಿಷಯದ Environmental Studies OMR ಕಳೆದಿರುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ.<br><br>ಮಹಾವಿದ್ಯಾಲಯದ ವಿದ್ಯಾರ್ಥಿಯ OMR ಕಳೆದಿರುವ ಕುರಿತು ಕುಲಸಚಿವರು (ಮೌಲ್ಯಮಾಪನ) ರವರು ವಿವರಗಳನ್ನು ಸಭೆಗೆ ನೀಡಿದರು. ಈ ಕುರಿತು ಕಾನೂನು ಸಲಹೆಗಾರರ ಅಭಿಪ್ರಾಯದಂತೆ ಎರಡು ವಿಧಾನಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಂಡು ಫಲಿತಾಂಶ ಪ್ರಕಟಿಸುವುದು ಉಚಿತವೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.<br><br>ಸದಸ್ಯರಾದ ಶ್ರೀ. ಹೆಚ್.ಆರ್. ಸತೀಶ ರವರು ಇಂತಹ ಸಂದರ್ಭಗಳನ್ನು ಎದುರಿಸಲು ಒಂದು ನೀತಿ ನಿರ್ಧಾರ (Policy decision) ತೆಗೆದುಕೊಳ್ಳ ಬೇಕಾಗುತ್ತದೆ, ವಿಶ್ವವಿದ್ಯಾಲಯ ಈ ಕುರಿತು ತನ್ನ ಕರ್ತವ್ಯವನ್ನು ನಿರ್ವಹಿಸಿದೆ ಇಂತಹ ಸಂದರ್ಭ ಪುನರಾವರ್ತನೆ ಅಥವಾ ದುರುಪಯೋಗ ಆಗದಂತೆ ಎಚ್ಚರಿಕೆ ವಹಿಸುವಂತಹ ಕ್ರಮಗಳ ಕುರಿತು ಚಿಂತಿಸ ಬೇಕೆಂದು ತಿಳಿಸಿದರು.<br>**ಸಿಂಡಿಕೇಟ್ ನಿರ್ಣಯ:**<br><br>**ಈ ಕುರಿತು ಸಮಗ್ರವಾಗಿ ಪರಿಶೀಲಿಸಿ ವರದಿ ನೀಡಲು ಕೆಳಕಂಡ ಸಮಿತಿ ರಚಿಸಲಾಯಿತು:**<br>1. ಕುಲಸಚಿವರು (ಮೌಲ್ಯಮಾಪನ) .. ಅಧ್ಯಕ್ಷರು<br>2. ಡಾ:ಹೆಚ್.ಟಿ. ಅರವಿಂದ .. ಸದಸ್ಯರು<br>3. ಡಾ: ಶಾಂತಿ ರಾಜೇಂದ್ರಕುಮಾರ .. ಸದಸ್ಯರು<br><br>**ಸದರಿ ಸಮಿತಿ ಪ್ರಸ್ತುತ ವಿದ್ಯಾರ್ಥಿಯ OMR ಕುರಿತು ಕೈಕೊಳ್ಳ ಬೇಕಾದ ನಿರ್ಣಯ ಹಾಗೂ ಇನ್ನು ಮುಂದೆ ಇಂತಹ ಘಟನೆಗಳ ಪುನರಾವರ್ತನೆ ಆಗದಂತೆ ಮಾರ್ಗೋಪಾಯಗಳನ್ನು ಸೂಚಿಸಬೇಕೆಂದು ತಿಳಿಸಿದರು.** |
| ವಿಷಯ ಸಂಖ್ಯೆ –17 | Taking the services of Technical Advisor for Bengaluru Central University, Central College Campus, Bengaluru.<br><br>ಸದಸ್ಯರಾದ ಶ್ರೀ. ಹೆಚ್.ಆರ್. ಸತೀಶ ರವರು ಚರ್ಚೆಯಲ್ಲಿ ಪಾಲ್ಗೊಂಡು, ಪ್ರಾಸ್ತಾವನೆಯಲ್ಲಿ ನಮೂದಿಸಿದ Technical Advisor ರವರಿಗೆ ಜೂನ್ 2019 ರಲ್ಲಿ ಆದೇಶ ನೀಡಿದ್ದರೂ ಕೂಡ ಇದರ ಪ್ರಸ್ತಾಪ ಸಿಂಡಿಕೇಟ್ ಅಥವಾ ಕಾಮಗಾರಿ ಸಮಿತಿಗಳಲ್ಲಿ ಬರದಿರುವುದು ಆಶ್ಚರ್ಯಕರವೆಂದು ತಿಳಿಸಿದರು.<br><br>ಕುಲಪತಿಗಳು ವಿವರಣೆ ನೀಡಿ ಈ ವಿಷಯ ಮೊದಲೇ ಸಿಂಡಿಕೇಟ್ ಸಭೆಗೆ ತರಬೇಕಾಗಿತ್ತು ಇದು ಕಣ್ಣು ತಪ್ಪಿನಿಂದಾಗಿ ಬಿಟ್ಟು ಹೋಗಿದೆ. ಪ್ರಾಸ್ತಾವನೆಯಲ್ಲಿ ತಿಳಿಸಿದ Technical Advisor Dr. Ajit Sabnis ರವರ ಸೇವೆ ಪಡೆಯಲಾಗಿರುವ ಕುರಿತು ವಿವರಗಳು ಮತ್ತು ವರದಿಗಳು ಕಡತದಲ್ಲಿವೆ. ಅವರು ಕಟ್ಟಡಗಳ ಸ್ಥಿತಿಗತಿ ಕುರಿತು ಹಲವು ವರದಿಗಳನ್ನು ನೀಡಿರುತ್ತಾರೆ ಎಂದು ತಿಳಿಸಿ ಸದಸ್ಯರಾದ ಶ್ರೀ ಹೆಚ್.ಆರ್. ಸತೀಶ ರವರು ದಾಖಲೆಗಳನ್ನು ಪರಿಶೀಲಿಸಿ Technical Advisor ರವರ ಸೇವೆ ಕುರಿತು ವರದಿ ನೀಡಲು ಹಾಗೂ ಅವರ ವರದಿಯ ಆಧಾರದ ಮೇಲೆ ಅವರಿಗೆ ಪಾವತಿ ಮಾಡಬೇಕಾದ ಸಲಹಾ ಶುಲ್ಕ ಕುರಿತು ತೀರ್ಮಾನ ಕೈಕೊಳ್ಳಲು ಅನುಮತಿ ನೀಡಬಹುದೆಂದು ತಿಳಿಸಿದರು.<br>**ಸಿಂಡಿಕೇಟ್ ನಿರ್ಣಯ:**<br><br>**ಚರ್ಚೆಯ ನಂತರ, ಸದಸ್ಯರಾದ ಶ್ರೀ. ಹೆಚ್.ಆರ್. ಸತೀಶ ರವರು Dr. Ajit Sabnis ರವರ ನಿರ್ವಹಿಸಿರುವ ಕೆಲಸಗಳ ಕುರಿತು ಸಂಬಂಧಿಸಿದ ಕಡತಗಳನ್ನು ಹಾಗೂ ಅವರು ನೀಡಿರುವ ವರದಿಗಳನ್ನು ಅದಷ್ಟು ಬೇಗನೆ ಪರಿಶೀಲಿಸಿ ವರದಿ ನೀಡಲು ಹಾಗೂ ಆ ವರದಿಯ ಆಧಾರದ ಮೇಲೆ ಮುಂದಿನ ಕ್ರಮ ಕೈಕೊಳ್ಳಬೇಕೆಂದು ತೀರ್ಮಾನಿಸಲಾಯಿತು.** |

| | |
|---|---|
| ವಿಷಯ ಸಂಖ್ಯೆ–18 | ಪರೀಕ್ಷಾ ಸಂಭಾವನೆ ಪರಿಷ್ಕರಿಸಲು ರಚಿಸಿದ್ದ ಸಮಿತಿಯು ಶಿಫಾರಸ್ಸು ಮಾಡಿರುವ ಪರಿಷ್ಕøತ ಪರೀಕ್ಷಾ ಸಂಭಾವನೆ ಮತ್ತು ಭತ್ಯೆಯನ್ನು ಪರೀಶಿಲಿಸುವ ಬಗ್ಗೆ.<br>ಸಿಂಡಿಕೇಟ್ ನಿರ್ಣಯ:<br>**ಸರ್ಕಾರ ಈ ಕುರಿತು ರಚಿಸಿದ ಸಮಿತಿಯ ವರದಿಯ ಮೇಲೆ ತೀರ್ಮಾನ ಕೈಕೊಳ್ಳುವ ವರೆಗೆ ಬೆಂಗಳೂರು ವಿಶ್ವವಿದ್ಯಾಲಯ ಪರಿಕ್ಷಾ ಸಂಭಾವನೆ ದರಗಳಂತೆ ಸಂಭಾವನೆ ನೀಡಲು ಕ್ರಮ ಕೈಕೊಳ್ಳಬೇಕೆಂದು ತೀರ್ಮಾನಿಸಲಾಯಿತು.** |
| ವಿಷಯ ಸಂಖ್ಯೆ–19 | ಸ್ನಾತಕೋತ್ತರ ಕೋರ್ಸುಗಳಿಗೆ ಮರುಮೌಲ್ಯಮಾಪನ ರದ್ದುಪಡಿಸಿ " ಚಾಲೆಂಜ್ ಮೌಲ್ಯಮಾಪನವನ್ನು " ಜಾರಿಗೆ ತರುವ ಬಗ್ಗೆ.<br>ಸದಸ್ಯರಾದ ಡಾ: ಎನ್. ನರಸಿಂಹಮೂರ್ತಿಯವರು ಪ.ಜಾ/ಪ.ಪಂ. ವಿದ್ಯಾರ್ಥಿಗಳಿಗೆ ಶುಲ್ಕದಲ್ಲಿ ವಿನಾಯಿತಿ ನೀಡುವ ಕುರಿತು ಪರಿಶಿಲೀಸಬೇಕೆಂದು ತಿಳಿಸಿದರು. ಕುಲಸಚಿವರು (ಮೌಲ್ಯಮಾಪನ) ರವರು ವಿವರಣೆ ನೀಡಿ ಬೇರೆ ವಿಶ್ವವಿದ್ಯಾಲಯಗಳಲ್ಲಿ ಚಾಲೇಂಜ್ ಮೌಲ್ಯಮಾಪನಕ್ಕೆ ಯಾವುದೇ ವಿನಾಯಿತಿ ಇರುವುದಿಲ್ಲವೆಂದು ತಿಳಿಸಿದರು.<br>ಸಿಂಡಿಕೇಟ್ ನಿರ್ಣಯ:<br>**ಚರ್ಚೆನಂತರ "ಚಾಲೆಂಜ್ ಮೌಲ್ಯಮಾಪನ" ಜಾರಿಯಲ್ಲಿ ತಂದಿರುವ ಹಾಗೂ ಇದಕ್ಕೆ ರೂ.3000/– ಶುಲ್ಕ ನಿಗದಿ ಪಡಿಸಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು.** |
| ವಿಷಯ ಸಂಖ್ಯೆ–20 | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ 2016–2017, 2017–18 ಹಾಗೂ 2018–19 ರ ಲೆಕ್ಕ ತಖ್ತೆಗಳನ್ನು ಸಿಂಡಿಕೇಟ್ ಅನುಮೋದನೆಗಾಗಿ ಮಂಡಿಸುವ ಬಗ್ಗೆ<br>ವಿತ್ತಾಧಿಕಾರಿಗಳು ಸಭೆಗೆ ಆಗಮನಿಸಿ 2016–17, 2017–18 ಹಾಗೂ 2018–19ರ ತಖ್ತೆಗಳ ವಿವರಗಳನ್ನು ಸಿಂಡಿಕೇಟ್ ಸಭೆಗೆ ಒದಗಿಸಿದರು. ಸದರಿ ವರ್ಷಗಳಲ್ಲಿ ಆರಂಭಿಕ ಶಿಲ್ಕು, ಸ್ವೀಕೃತಿ ಹಾಗೂ ವೆಚ್ಚಗಳ ವಿವರಗಳನ್ನು ಒದಗಿಸಿ, ಇದು S & Y Advisory Services Pvt Ltd ರವರು ಸಲ್ಲಿಸಿದ ಲೆಕ್ಕ ತಖ್ತೆಗಳಾಗಿದ್ದು ಇದರ ಮೇಲೆ ಶಾಸನಬದ್ಧವಾದ ಲೆಕ್ಕ ಪರಶೋಧನೆ ಜರುಗಬೇಕಾಗಿದೆ ಎಂದು ತಿಳಿಸಿದರು. ಲೆಕ್ಕ ತಖ್ತೆಯ ಪ್ರಕಾರ 2018–19 ರ ಅಂತ್ಯಕ್ಕೆ ರೂ 49.78 ಕೋಟಿಗಳ ಮುಕ್ತಾಯದ ಶಿಲ್ಕು ಆಗಿರುತ್ತದೆ ಎಂದು ಹಾಗೂ ಮೇಲಿನ ಅವಧಿಗೆ ವಿಶ್ವವಿದ್ಯಾಲಯದಿಂದ ಆದಾಯ ತೆರಿಗೆ ರಿಟರ್ನ್ಸ್ ದಾಖಲಿಸುವುದು ಬಾಕಿ ಇದೆ ಎಂದು ತಿಳಿಸಿದರು. ಆದಾಯ ತೆರಿಗೆ ಇಲಾಖೆಯ ವಾಸ್ತವಿಕ ಅಂಶಗಳನ್ನು ವಿವರಿಸಿ, ವಿಳಂಬವನ್ನು ಮನ್ನಾ ಮಾಡಲು ವಿನಂತಿಸಬೇಕಾಗಿದೆ ಇದಕ್ಕಾಗಿ ವಿಳಂಬ ಮನ್ನಸಿ (condonation of delay) ತೀರ್ಮಾನ ತೆಗೆದುಕೊಳ್ಳಬೇಕಾಗಿದೆ ಎಂದು ತಿಳಿಸಿದರು. 12A ನೊಂದಣಿ ಇರುವುದರಿಂದ 5 ವರ್ಷಗಳಲ್ಲಿ ವಿಶ್ವವಿದ್ಯಾಲಯದ ಖಾತೆಯಲ್ಲಿರುವ ಹಣ ವೆಚ್ಚಮಾಡಬೇಕಾಗುತ್ತದೆ ಇಲ್ಲದಿದ್ದಲ್ಲಿ ಒಟ್ಟು ಮೊತ್ತದ ಮೇಲೆ ಶೇಕಡ 30 ರಷ್ಟು ಆದಾಯ ತೆರಿಗೆ ನೀಡಬೇಕಾಗುತ್ತದೆ ಎಂದು ತಿಳಿಸಿದರು.<br>ಸದಸ್ಯರಾದ ಡಾ. ಅರವಿಂದ ಹಾಗೂ ಶ್ರೀ ಸತೀಶ್ ರವರು ರಾಷ್ಟ್ರೀಕೃತ ಬ್ಯಾಂಕಗಳಲ್ಲದೆ ಹಲವು ಖಾಸಗಿ ಬ್ಯಾಂಕಗಳಲ್ಲಿ ಖಾತೆಗಳನ್ನು ಹೊಂದಿರುವ ಕುರಿತು ಮಾಹಿತಿ ಕೇಳಿದರು, ಇದಕ್ಕೆ ಮಾಹಿತಿ ನೀಡುತ್ತಾ ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕ ಇತ್ಯಾದಿಗಳ ಆನಲೈನ್ ಪಾವತಿಗಾಗಿ ಈ ಖಾತೆಗಳನ್ನು ತೆಗೆಯಲಾಗಿದೆ. ಇವು ಬರೀ ಸ್ವಿಕೃತಿ ಖಾತೆಗಳಿಗಿದ್ದು ಇದರಿಂದ ಯಾವುದು ವೆಚ್ಚಗಳನ್ನು ಮಾಡಿಲ್ಲವೆಂದು ತಿಳಿಸಿದರು. ಸರ್ಕಾರದ ಆದೇಶದ ಪ್ರಕಾರ ವಿಶ್ವವಿದ್ಯಾಲಯ ರಾಷ್ಟ್ರೀಕೃತ ಬ್ಯಾಂಕಗಳಲ್ಲಿ ಖಾತೆ ಪ್ರಾರಂಭಿಸಬೇಕಾಗಿದೆ ಮತ್ತು ಹಣಕಾಸು ವಿಭಾಗದ ಹೊರಗಡೆ ಇರುವ ಖಾತೆಗಳನ್ನು ಇಬ್ಬರು ಸಹಿಮಾಡಿ ನಿರ್ವಹಿಸಲು ಅಧಿಕಾರ ನೀಡಬೇಕೆಂದು, ಅದರಲ್ಲಿ ಒಬ್ಬರು ಕಡ್ಡಾಯವಾಗಿ ಹಣಕಾಸು ಅಧಿಕಾರಿ ಇರಬೇಕೆಂದು ತಿಳಿಸಿದರು. |

ಪರೀಕ್ಷಾ ಶುಲ್ಕಗಳನ್ನು Gateway ಮುಖಾಂತರ ಪಾವತಿ ಮಾಡಲಾಗುತ್ತಿದ್ದು ಸಂಬಂಧಿಸಿದ Gateway ಗಳು ಒಟ್ಟಾರೆ ಸ್ವೀಕರಿಸಲಾದ ಮೊತ್ತವನ್ನು ವಿಶ್ವವಿದ್ಯಾಲಯದ ಖಾತೆಗೆ ಪಾವತಿ ಮಾಡುತ್ತಿರುವುದರಿಂದ, ಸ್ವೀಕೃತಿಗಳ ಲೆಕ್ಕಹೊಂದಣಿಕೆಗೆ ತೊಂದರೆಯಾಗಿದೆ ಕಾರಣ ಕುಲಸಚಿವರು (ಮೌಲ್ಯಮಾಪನ) ರವರು ಈ Gateway ಸಂಸ್ಥೆಗಳೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆ ಅಥವಾ ಪ್ರತಿಯೊಂದು ಸ್ವೀಕೃತಿಯ ಕುರಿತು ವೈಯಕ್ತಿಕವಾದ ವಿವರಗಳನ್ನು ನೀಡಿದಲ್ಲಿ ಲೆಕ್ಕ ಹೊಂದಣಿಕೆಗೆ ಅನುಕೂಲವಾಗುವುದು ಎಂದು ತಿಳಿಸಿದರು.

ಸಿಂಡಿಕೇಟ್ ತೀರ್ಮಾನ

a) 2016-17, 2017-18 ಹಾಗೂ 2018-19 ರ ಮೂರು ಆರ್ಥಿಕ ಸಾಲುಗಳ ಲೆಕ್ಕ ತಖ್ತೆಗಳಿಗೆ ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು.

b) 2016- 17, 2017-18 ಹಾಗೂ 2018-19ರ ಆರ್ಥಿಕ ಸಾಲುಗಳ ಲೆಕ್ಕ ಪರಿಶೋಧನೆ ಅಗತ್ಯ ಕ್ರಮ ಕೈಕೊಳ್ಳಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು.

c) 2016-17, 2017-18 ಹಾಗೂ 2018-19 ರ ಸಾಲಿನ ಆದಾಯ ತೆರಿಗೆ ರಿಟರ್ನ್ಸ್‌ಗಳನ್ನು ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಲು ಕ್ರಮಕೈಕೊಳ್ಳಬೇಕೆಂದು ತೀರ್ಮಾನಿಸಲಾಯಿತು.

ವಿಶ್ವವಿದ್ಯಾಲಯದಲ್ಲಿ ಪೂರ್ಣಾವಧಿಯ ವಿತ್ತಾಧಿಕಾರಿಗಳ ನೇಮಕವಾಗುವಲ್ಲಿ ವಿಳಂಬವಾಗಿರುವ ಕಾರಣ ಮತ್ತು ಸಿಬ್ಬಂದಿಗಳ ಕೊರತೆಯಿಂದಾಗಿ ಆದಾಯ ತೆರಿಗೆ ರಿಟರ್ನ್ಸ್ ಗಳನ್ನು ಸಲ್ಲಿಸುವಲ್ಲಿ ವಿಳಂಬವಾಗಿರುವುದನ್ನು ಸಿಂಡಿಕೇಟ್ ಸಭೆ ಪರಿಗಣಿಸಿ ವಿಳಂಬವನ್ನು ಮನ್ನಿಸಿ (condonation of delay) ಆದಾಯ ತೆರಿಗೆ ರಿಟರ್ನ್ಸ್‌ಗಳನ್ನು ಇಲಾಖೆಗೆ ಸಲ್ಲಿಸಲು ಅನುಮತಿಸಲಾಯಿತು

d) ಖಾಸಗಿ ಬ್ಯಾಂಕುಗಳಲ್ಲಿ ಇರುವ ಖಾತೆಗಳನ್ನು ಸ್ಥಗಿತಗೊಳಿಸಿ, ಇವುಗಳನ್ನು ವಿಶ್ವವಿದ್ಯಾಲಯ ಈಗಾಗಲೇ ಬ್ಯಾಂಕು ಖಾತೆಗಳನ್ನು ಹೊಂದಿರುವ ರಾಷ್ಟ್ರೀಕೃತ ಬ್ಯಾಂಕಗಳಲ್ಲಿ ಅಳವಡಿಸಿಕೊಳ್ಳಲು ತೀರ್ಮಾನಿಸಲಾಯಿತು.

e) Gateway Payment ಕುರಿತು ಮಾಡಿಕೊಂಡಿರುವ ಒಪ್ಪಂದ ಪತ್ರ ಮತ್ತು ಇಂತಹ Gateway Paymentಗಳ ಪ್ರತಿ ಸ್ವೀಕೃತಿಯ ವಿವರಗಳನ್ನು ಒದಗಿಸುವಂತೆ ಕುಲಸಚಿವರು (ಮೌಲ್ಯಮಾಪನ) ರವರಿಗೆ ಸೂಚಿಸಲಾಯಿತು.

f) ದೈನದಿನ ಆಡಳಿತ ನಿರ್ವಹಣೆಗೆ ವಿತ್ತಾಧಿಕಾರಿಗಳು ನಿರ್ವಹಿಸುವ ಬ್ಯಾಂಕು ಖಾತೆಗಳನ್ನು ಹೊರತುಪಡಿಸಿ ಬೇರೆ ಬೇರೆ ವಿಭಾಗ / ಕಛೇರಿಗಳು ನಿರ್ವಹಿಸುವ ಖಾತೆಗಳನ್ನು ಸರ್ಕಾರದ ಆದೇಶ ಸಂಖ್ಯೆ: FD 5 TAR 2017 dated:30.1.2017 ರಲ್ಲಿ ಸೂಚಿಸಿದ ಮಾರ್ಗದರ್ಶನಗಳಂತೆ ಹಣಕಾಸು ವಿಭಾಗದ ಹೊರಗಡೆ ಇರುವ ಖಾತೆಗಳನ್ನು ಇಬ್ಬರು ಸಹಿಮಾಡಿ ನಿರ್ವಹಿಸುವ ಖಾತೆಗಳಾಗಿ ಪರಿವರ್ತಿಸಿ, ಆ ಇಬ್ಬರಲ್ಲಿ ವಿತ್ತಾಧಿಕಾರಿಗಳ ಸಹಿ ಕಡ್ಡಾಯವಾಗಿರಿವಂತೆ ಸೂಚಿಸಿ ಬ್ಯಾಂಕ್ ಖಾತೆಗಳನ್ನು ನಿರ್ವಹಿಸಬೇಕೆಂದು ತೀರ್ಮಾನಿಸಲಾಯಿತು

ಮೇಲೆ ನಮೂದಿಸಿದ ಅಂಶಗಳ ಕುರಿತು ವಿತ್ತಾಧಿಕಾರಿಗಳು ಕೂಡಲೇ ಕ್ರಮ ಜರುಗಿಸಬೇಕೆಂದು ತೀರ್ಮಾನಿಸಲಾಯಿತು.

| | |
|---|---|
| ವಿಷಯ ಸಂಖ್ಯೆ–21 | ಸರ್ಕಾರಿ ಆರ್.ಸಿ. ಕಾಲೇಜಿನಲ್ಲಿ ಎಂ.ಕಾಂ (ಎಂ.ಎಫ್.ಎ) ವಿದ್ಯಾರ್ಥಿಗಳಿಗೆ ನಿಯಮದಂತೆ ಆಂತರಿಕ ಅಂಕಗಳನ್ನು ನೀಡದೇ ಇರುವ ಬಗ್ಗೆ ಪರಿಶೀಲಿಸಲು ಸಿಂಡಿಕೇಟ್ ರಚಿಸಿದ್ದ ಸಮಿತಿಯು ನೀಡಿರುವ ವರದಿಯನ್ನು ಮಂಡಿಸುವ ಕುರಿತು.<br><br>**ಸಿಂಡಿಕೇಟ್ ನಿರ್ಣಯ:**<br><br>**ವಿಚಾರಣಾ ಸಮಿತಿಯ ವರದಿಯನ್ನು ಒಪ್ಪಿಕೊಳ್ಳಲಾಯಿತು.** |
| ವಿಷಯ ಸಂಖ್ಯೆ–22 | Consideration of appointment of Guest Faculty in the Department of Kannada and English – reg.<br><br>ಕನ್ನಡ ವಿಭಾಗದ ಅತಿಥಿ ಉಪನ್ಯಾಸಕರ ಕುರಿತು ಕುಲಪತಿಗಳು ವಿವರಣೆ ನೀಡುತ್ತಾ, ಅತಿಥಿ ಉಪನ್ಯಾಸಕರ ನೇಮಕಾತಿ ಸಮಿತಿ ಒಟ್ಟು ಆರು ಜನರನ್ನು ಶಿಫಾರಸ್ಸು ಮಾಡಿದ್ದು, ಅವರಲ್ಲಿ ಒಬ್ಬರು ವರದಿ ಮಾಡಿಕೊಳ್ಳಲು ಆಸಕ್ತಿ ಹೊಂದಿಲ್ಲವೆಂದು ತಿಳಿಸಿದರು. ಕಳೆದ ವರ್ಷ ಕನ್ನಡ ವಿಭಾಗದ ಪಠ್ಯಕ್ರಮ ಸಿದ್ದಪಡಿಸಿದ ಅಧ್ಯಯನ ಮಂಡಳಿಯ ಸದಸ್ಯರಾದ ಕೆ.ವೈ. ನಾರಾಯಣಸ್ವಾಮಿ ಒಳಗೊಂಡಂತೆ ಹಿರಿಯ ಪ್ರಾಧ್ಯಾಪಕರಾದ ಡಾ: ಸೆಲ್ವಕುಮಾರಿ ಹಾಗೂ ಡಾ: ರಾಘವೇಂದ್ರರಾವ್‌ರವರು ಮುಂತಾದವರು ಬೋಧನೆಯಲ್ಲಿ ತೊಡಗಿಸಿಕೊಂಡಿದ್ದು ಅದರಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ, ಕಾರಣ ಈ ವರ್ಷ ಸಹ ಅವರಿಗೆ ಪಾಠ ಪ್ರವಚನ ನೀಡಲು ಅವಕಾಶ ಕಲ್ಪಿಸಬೇಕೆಂದು ತಿಳಿಸಿದರು. ಇದಕ್ಕೆ ಸಂಬಂಧಿಸಿದಂತೆ ಮಹಾರಾಣಿ ಮಹಾವಿದ್ಯಾಲಯದ ಪ್ರಾಂಶುಪಾಲರು ಅನುಮತಿ ಪತ್ರ ನೀಡಿರುತ್ತಾರೆ ಇಂದು ತಿಳಿಸಿದರು.<br><br>ಸದಸ್ಯರಾದ ಡಾ: ಅರವಿಂದ ಹೆಚ್.ಟಿ. ಹಾಗೂ ಡಾ: ಎನ್. ನರಸಿಂಹಮೂರ್ತಿ ರವರು ಡಾ: ನಾರಾಯಣಸ್ವಾಮಿ ಅವರು ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಪೂರ್ಣಾವಧಿ ಬೋಧಕರಾಗಿದ್ದು, ಅಲ್ಲಿ ಬೆಳಿಗ್ಗೆ 10–00 ರಿಂದ ಸಾಯಂಕಾಲ 5–00ರ ವರೆಗೆ ಕೆಲಸ ನಿರ್ವಹಿಸಬೇಕಾಗುತ್ತದೆ ಕಾರಣ ಅವರು ಈ ವಿಶ್ವವಿದ್ಯಾಲಯದಲ್ಲಿ ಅತಿಥಿ ಉಪನ್ಯಾಸಕರಾಗಿ ಕೆಲಸ ನಿರ್ವಹಿಸಲು ಸಾಧ್ಯವಾಗುವದಿಲ್ಲವೆಂದು ತಿಳಿಸಿದರು. ಪಠ್ಯಕ್ರಮ ರಚಿಸಿದವರೇ ಪಾಠ ಮಾಡಬೇಕಾದ ನಿಯಮವಿಲ್ಲ, ಅವರ ಅನುಭವ ಹಾಗೂ ಪಾಂಡಿತ್ಯವನ್ನು ವಿಶ್ವವಿದ್ಯಾಲಯ ಅಧ್ಯಯನ ಮಂಡಳಿ ಇತ್ಯಾದಿಗಳಲ್ಲಿ ಬಳಸಿಕೊಳ್ಳಬಹುದೆಂದು ತಿಳಿಸಿದರು.<br>ಪ್ರಾಂಶುಪಾಲರಾದ ಡಾ: ಆಶಾ ಗಣೇಶ, ಡಾ: ಶಾಂತಿ ರಾಜೇಂದ್ರ ಕುಮಾರ ಡಾ: ಲತಾಕುಮಾರಿ ಮತ್ತು ಕುಲಸಚಿವರು (ಮೌಲ್ಯಮಾಪನ) ಅವರು ಕುಲಪತಿಗಳು ಸೂಚಿಸಿದಂತೆ ಡಾ: ನಾರಾಯಣಸ್ವಾಮಿ ಹಾಗೂ ಇತರರಿಗೆ ಬೋಧನಾ ಕೆಲಸ ವಹಿಸಬಹುದೆಂದು ತಿಳಿಸಿದರು. ಡಾ: ಎಸ್. ಹರೀಶರವರು ಚರ್ಚೆಯಲ್ಲಿ ಪಾಲ್ಗೊಂಡು ಬೇರೊಂದು ಸಮಿತಿ ರಚಿಸಿ ಅದರ ಶಿಫಾರಸ್ಸಿನಂತೆ ಕ್ರಮ ಕೈಕೊಳ್ಳಬಹುದೆಂದು ತಿಳಿಸಿದರು.<br><br>ಸದಸ್ಯರಾದ ಡಾ: ಅರವಿಂದ ಹಾಗೂ ಡಾ: ನರಸಿಂಹಮೂರ್ತಿರವರು ಪ್ರಾಂಶುಪಾಲರು ನೀಡಿರುವ ಅನುಮತಿ ಪತ್ರ ಒಪ್ಪಿಕೊಳ್ಳಲು ಸಾಧ್ಯವಾಗುವದಿಲ್ಲವೆಂದು ತಿಳಿಸಿ, ಒಂದು ವೇಳೆ ಡಾ: ಕೆ. ವೈ. ನಾರಾಯಣಸ್ವಾಮಿ ಅವರ ಸೇವೆ ಪಡೆಯುವದಾದಲ್ಲಿ, ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರಿಂದ ಅನುಮತಿ ನೀಡಿದ ಆದೇಶ ನೀಡಿದಲ್ಲಿ ಪರಿಗಣಿಸಬಹುದೆಂದು ತಿಳಿಸಿದರು. ಕುಲಪತಿಗಳು ಇದಕ್ಕೆ ಸಮ್ಮತಿ ಸೂಚಿಸಿ, ಡಾ: ಕೆ.ವೈ. ನಾರಾಯಣಸ್ವಾಮಿ ಅವರ ಸೇವೆ ನೀಡಲು |

| | |
|---|---|
| | ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರಿಂದ ಆದೇಶ ಪಡೆದು ಅತಿಥಿ ಉಪನ್ಯಾಸಕರಾಗಿ ಸೇವೆ ಪಡೆಯಲಾಗುವದು ಎಂದು ತಿಳಿಸಿದರು.<br><br>ಸಿಂಡಿಕೇಟ್ ತೀರ್ಮಾನ:<br><br>ಅ) ಕನ್ನಡ ವಿಭಾಗ:<br><br>1. ಪ್ರಸ್ತಾವನೆಯಲ್ಲಿ ನಮೂದಿಸಿರುವ 6 ಜನ ಅತಿಥಿ ಉಪನ್ಯಾಸಕರಲ್ಲಿ ಡಾ: ಬಸವರಾಜ ಸಬರದ ಮತ್ತು ಡಾ: ಕುಮಾರಸ್ವಾಮಿ ಬಿ.ಇ. ಇವರುಗಳನ್ನು ಹೊರತುಪಡಿಸಿ ಉಳಿದ ನಾಲ್ಕು ಜನರಿಗೆ ಹಾಗೂ ಡಾ॥ ಪದ್ಮರಾಜ್ ದಂಡಾವತೆ ಅವರಿಗೆ ಅತಿಥಿ ಉಪನ್ಯಾಸಕರಾಗಿ ನೇಮಕಾತಿ ಆದೇಶ ನೀಡಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು.<br>2. ಡಾ: ಕೆ.ವೈ. ನಾರಾಯಣಸ್ವಾಮಿ ಮತ್ತು ಡಾ: ಸೆಲ್ವ ಕುಮಾರಿ ಅವರುಗಳನ್ನು ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರು ಅನುಮತಿ ನೀಡಿ ಆದೇಶಿಸಿದ ನಂತರ ಅತಿಥಿ ಉಪನ್ಯಾಸಕರಾಗಿ ಸೇವೆ ಪಡೆಯಲು ಆದೇಶ ನೀಡಬಹುದೆಂದು ತೀರ್ಮಾನಿಸಿತು.<br><br>ಸದಸ್ಯರಾದ ಡಾ: ಅರವಿಂದ ಹೆಚ್.ಟಿ. ಹಾಗೂ ಡಾ: ಎನ್. ನರಸಿಂಹಮೂರ್ತಿ ರವರು ಮೇಲಿನ ಸಿಂಡಿಕೇಟ್ ತೀರ್ಮಾನಕ್ಕೆ ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿದರು.<br><br>ಆ) ಆಂಗ್ಲ ವಿಭಾಗ:<br><br>ಆಂಗ್ಲ ವಿಭಾಗದ ಅತಿಥಿ ಉಪನ್ಯಾಸಕರ ಕುರಿತಂತೆ ನೇಮಕಾತಿ ಸಮಿತಿ ಶಿಫಾರಸ್ಸು ಮಾಡಿರುವ ಅತಿಥಿ ಉಪನ್ಯಾಸಕರಾದ ಶ್ರೀ. ಲಿಯೋನಾರ್ಡ ಡಿಸೋಜ ಹಾಗೂ ಶ್ರೀಮತಿ. ರಶ್ಮಿ ನಾಯಕ್ ಇವರುಗಳಿಗೆ ತಲಾ 16 ಗಂಟೆಗಳ ಬೋಧನಾ ಅವಧಿ ನೀಡಿ ಪೂರ್ಣಾವಧಿ ಅತಿಥಿ ಉಪನ್ಯಾಸಕರಾಗಿ ಪರಿಗಣಿಸಬೇಕೆಂದು ಮತ್ತು ಉಳಿದ ಬೋಧನಾ ಅವಧಿಯನ್ನು ಕಳೆದ ವರ್ಷ ಅತಿಥಿ ಉಪನ್ಯಾಸಕರಾಗಿ ಪಾಠ ಮಾಡಿದ ಹಿರಿಯ ಹಾಗೂ ನಿವೃತ್ತ ಪ್ರಾಧ್ಯಾಪಕರುಗಳಾದ ಡಾ॥ ಮನು ಚಕ್ರವರ್ತಿ, ಡಾ॥ಶ್ರೀಧರ್, ಡಾ॥ ಯೋಗನಂದ್ ಮತ್ತು ಡಾ॥ ರಾಜರಾಮ್ ರವರಿಗೆ ವಹಿಸಲು ಅನುಮತಿ ನೀಡಲು ಸಿಂಡಿಕೇಟ್ ಸಭೆಗೆ ಕುಲಪತಿಗಳು ವಿನಂತಿಸಿದರು.<br><br>ಸಿಂಡಿಕೇಟ್ ತೀರ್ಮಾನ:<br><br>ಚರ್ಚೆಯ ನಂತರ ಶ್ರೀ. ಲಿಯೋನಾರ್ಡ ಡಿಸೋಜ ಹಾಗೂ ಶ್ರೀಮತಿ. ರಶ್ಮಿ ನಾಯಕ್ ಇವರುಗಳಿಗೆ ತಲಾ 16 ಗಂಟೆಗಳ ಬೋಧನಾ ಅವಧಿ ನೀಡಿ ಪೂರ್ಣಾವಧಿ ಅತಿಥಿ ಉಪನ್ಯಾಸಕರಾಗಿ ನೇಮಕಮಾಡಲು ಹಾಗೂ ಉಳಿದ ಬೋಧನಾ ಅವಧಿಯನ್ನು ಕಳೆದ ವರ್ಷ ಅತಿಥಿ ಉಪನ್ಯಾಸಕರಾಗಿ ಪಾಠ ಮಾಡಿದ ಮೇಲೆ ತಿಳಿಸಿದ ಹಿರಿಯ ಹಾಗೂ ನಿವೃತ್ತ ಪ್ರಾಧ್ಯಾಪಕರುಗಳಿಗೆ ವಹಿಸಬೇಕೆಂದು ತೀರ್ಮಾನಿಸಲಾಯಿತು. |
| ವಿಷಯ ಸಂಖ್ಯೆ-23 | Incharge arrangements for academic matters of the Post Graduate Departments of BCU. |

| | |
|---|---|
| | ಸಿಂಡಿಕೇಟ್ ನಿರ್ಣಯ:<br>**After discussion, it was resolved that, as per the Statute of Bangalore University pertaining to the introduction of rotation while appointing Chairman of Department of Studies / Departmental Council notified on 11.11.1991, the Deans of the Faculties of Arts, Science, Commerce may be placed In-charge Chairman to look after the statutory duties of the concerned P.G. Departments of the respective faculties where the Department does not have Professor or Associate Professor.**<br>**Further it was resolved that the Co-ordinator of such P.G. Departments will attend to day to day activities of the department.** |
| ವಿಷಯ ಸಂಖ್ಯೆ–24 | 2018–19 ನೇ ಶೈಕ್ಷಣಿಕ ವರ್ಷದಲ್ಲಿ ಸಿ.ಬಿ.ಎಸ್.ಎಮ್.ಎಸ್ ನಲ್ಲಿ ಎಂ.ಬಿ.ಎ (ಸಂಜೆ) ಕಾಲೇಜಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಂದ ಸ್ವೀಕರಿಸಲಾದ ದಾಖಲಾತಿ ಶುಲ್ಕವನ್ನು ವಿಶ್ವವಿದ್ಯಾಲಯ ಖಾತೆಗೆ ಜಮೆ ಮಾಡದಿರುವುದರ ಬಗ್ಗೆ ರಚಿಸಲಾದ ವಿಚಾರಣಾ ಸಮಿತಿಯ ವರದಿಯನ್ನು ಪರಿಶೀಲಿಸುವ ಕುರಿತು.<br><br>ವಿಚಾರಣಾ ಸಮಿತಿಯ ವರದಿಯನ್ನು ಸಮಿತಿಯ ಅಧ್ಯಕ್ಷರಾದ ಕುಲಸಚಿವರು ಮಂಡಿಸಿದರು.<br><br>ಸದಸ್ಯರಾದ ಡಾ: ಎನ್. ನರಸಿಂಹಮೂರ್ತಿ, ಶ್ರೀ. ಹೆಚ್. ಆರ್. ಸತೀಶ, ಹಾಗೂ ಡಾ: ಹೆಚ್.ಟಿ. ಅರವಿಂದ ರವರು ಚರ್ಚೆಯಲ್ಲಿ ಪಾಲ್ಗೊಂಡು ಪ್ರಕರಣದ ವಿವಿಧ ಆಯಾಮಗಳನ್ನು ವಿವರಿಸಿದರು.<br><br>ವಿಭಾಗದ ಸಹಾಯಕ ಶ್ರೀ ಶಿವಶಂಕರ ಭೈರವ ರವರು ವಿದ್ಯಾರ್ಥಿಗಳಿಂದ ಲಕ್ಷಾಂತರ ರೂಪಾಯಿಗಳು ತನ್ನ ಖಾತೆಗೆ ವರ್ಗಾಯಿಸಿಕೊಂಡಿರುವುದು ವಿಚಾರಣೆಯಲ್ಲಿ ಲಿಖಿತರೂಪದಲ್ಲಿ ಒಪ್ಪಿಕೊಂಡಿರುವುದು ಮತ್ತು ಈ ಹಣವನ್ನು ಶ್ರೀ ಶಿವಶಂಕರ ಭೈರವ ಮತ್ತು ಡಾ: ಜನಾರ್ಧನಮ್ ರವರನ್ನು ವಿಚಾರಣೆ ಮಾಡಿ ಒಟ್ಟು ಶುಲ್ಕದ ಹಣವನ್ನು ವಿಶ್ವವಿದ್ಯಾಲಯದ ಖಾತೆಗೆ ಜಮಾ ಮಾಡಿರುವ ವಿವರಗಳನ್ನು ತಿಳಿಸಿ ಸಮಿತಿ ಕುಲಂಕುಷವಾಗಿ ವಿಚಾರಣೆ ನಡೆಸಿ ಕಂಡುಬಂದ ಲೋಪದೋಷಗಳನ್ನು ವರದಿಯಲ್ಲಿ ವಿವರವಾಗಿ ಪಟ್ಟಿಮಾಡಲಾಗಿದೆ ಎಂದು ತಿಳಿಸಿದರು.<br><br>ಡಿಪ್ಲೋಮ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅನರ್ಹ ವಿದ್ಯಾರ್ಥಿಗಳಿಗೆ MBA ಪ್ರವೇಶ ನೀಡಿದ್ದು ಅವರು ಈಗ 3 ನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗಮಾಡುತ್ತಿದ್ದು ಇವರ ಪ್ರವೇಶಗಳನ್ನು ರದ್ದುಪಡಿಸುವ ಕುರಿತು ಕಾನೂನು ಸಲಹೆಗಾರರ ಅಭಿಪ್ರಾಯ ಪಡೆದು ಮುಂದುವರೆಯ ಬೇಕೆಂದು ತಿಳಿಸಿದರು.<br><br>ಸದಸ್ಯರಾದ ಶ್ರೀ ಹೆಚ್. ಆರ್. ಸತೀಶ ರವರು ಮಾತನಾಡಿ, ಈ ಪ್ರವೇಶಗಳಿಗೆ ಸಂಬಂಧಿಸಿದ ಕಡತದಲ್ಲಿ ಅರ್ಧ ಪುಟದ ಟಿಪ್ಪಣಿ ಬಿಟ್ಟು ಬೇರೆ ಯಾವ ವಿವರಗಳು ಇಲ್ಲವೆಂದು ಇದು ಸಂಬಂಧಪಟ್ಟ ನೌಕರರ ಬೇಜವಾಬ್ದಾರಿ ಎಂದು ತಿಳಿಸಿದರು. ಸಂಬಂದ ಪಟ್ಟ ವಿಭಾಗದ ಮೇಲ್ವಿಚಾರಣೆ ವಹಿಸಿದ್ದ ಶ್ರೀ ಸಿದ್ದಲಿಂಗಯ್ಯ ನವರು ವಿವರಗಳನ್ನು ಪರಿಶೀಲಿಸದೆ ಮೇಲಾಧಿಕಾರಿಗಳ ಅನುಮೋದನೆ ಪಡೆದಿರುತ್ತಾರೆ. ಮೇಲಾಧಿಕಾರಿಗಳು ಸಹ ಈ ಕುರಿತು ಗಮನವಹಿಸಬೇಕಾಗಿತ್ತು ಎಂದು ತಿಳಿಸಿದರು. |

| | |
|---|---|
| | ವಿಚಾರಣಾ ಸಮಿತಿ ಅತ್ಯಂತ ಕಡಿಮೆ ಅವಧಿಯಲ್ಲಿ ವಿಚಾರಣೆ ನಡೆಸಿ ವರದಿ ಸಲ್ಲಿಸಿರುವುದಕ್ಕೆ ಕುಪತಿಗಳು ವಿಚಾರಣಾ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರಿಗೆ ಅಭಿನಂದನೆಗಳನ್ನು ವ್ಯಕ್ತ ಪಡಿಸಿದರು. ಇಂತಹ ಪ್ರಕರಣಗಳು ಮರುಕಳಿಸದಂತೆ ಎಚ್ಚರಿಕೆ ವಹಿಸುವುದು ಅಗತ್ಯವಾಗಿದೆ ಎಂದು ತಿಳಿಸಿ, ಈ ಘಟನೆ ಜರುಗಿದ ಸಂದರ್ಭದಲ್ಲಿ ಡಾ: ಜನಾರ್ಧನಮ್ ಹಾಗೂ ಶ್ರೀ ಶಿವಶಂಕರ ಭೈರವ ಇಬ್ಬರು ಬೆಂಗಳೂರು ವಿಶ್ವವಿದ್ಯಾಲಯದ ಸಿಬ್ಬಂದಿಗಳಾಗಿದ್ದರು. ಕಾರಣ ವರದಿಯನ್ನು ಪರಿಶೀಲಿಸಿ ಕ್ರಮಕೈಕೊಳ್ಳಬೇಕಾಗಿದೆ ಎಂದು ತಿಳಿಸಿದರು.<br><br>ಸಿಂಡಿಕೇಟ್ ನಿರ್ಣಯ:<br><br>(1) ವಿಚಾರಣಾ ಸಮಿತಿ ಸಲ್ಲಿಸಿರುವ ವರದಿಯನ್ನು ಪರಿಶೀಲಿಸಿ ಅನುಮೋದನೆ ನೀಡಲಾಯಿತು.<br>(2) ಈಗಾಗಲೇ ವಿಷಯ ಸಂಖ್ಯೆ 15 ರಲ್ಲಿ ತೀರ್ಮಾನಿಸಿದಂತೆ ಶ್ರೀ ಶಿವಶಂಕರ ಭೈರವ, ಸಹಾಯಕರು ಇವರನ್ನು ಅಮಾನತ್ತಿನಲ್ಲಿಟ್ಟಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲಾಗಿದೆ ಹಾಗೂ ಶಿಸ್ತು ಕ್ರಮ ಕೈಕೊಳ್ಳಲು ಸೂಚಿಸಲಾಗಿದೆ.<br>(3) ಪೋಲೀಸ್ ಠಾಣೆಯಲ್ಲಿ ಈ ಕುರಿತು ದೂರು ದಾಖಲಿಸಲು ಪೋಲೀಸ್ ಅಧಿಕಾರಿಗಳು ಕೋರಿರುವ ಎಲ್ಲಾ ದಾಖಲೆಗಳನ್ನು ಸಲ್ಲಿಸಿ ದೂರು ದಾಖಲಿಸ ಬೇಕೆಂದು ತೀರ್ಮಾನಿಸಲಾಯಿತು.<br>(4) ತನಿಖಾ ವರದಿಯ ಪ್ರತಿಗಳನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಮತ್ತು ಕುಲಸಚಿವರು, ಬೆಂಗಳೂರು ವಿಶ್ವವಿದ್ಯಾಲಯ ಇವರಿಗೆ ಪತ್ರದೊಂದಿಗೆ ಸಲ್ಲಿಸಬೇಕೆಂದು ತೀರ್ಮಾನಿಸಲಾಯಿತು.<br>(5) ಡಿಪ್ಲೋಮ ಆಧಾರದ ಮೇಲೆ ಪ್ರವೇಶ ಪಡೆದು ವ್ಯಾಸಂಗ ಮುಂದುವರೆಸಿರುವ ಅನರ್ಹ ವಿದ್ಯಾರ್ಥಿಗಳ ಕುರಿತು ಕಾನೂನು ಅಭಿಪ್ರಾಯ ಪಡೆದು ಅವರ ಪ್ರವೇಶ ಹಾಗೂ ಫಲಿತಾಂಶಗಳನ್ನು ರದ್ದುಪಡಿಸುವ ಕುರಿತು ಕ್ರಮ ಕೈಕೊಳ್ಳಬೇಕೆಂದು ತೀರ್ಮಾನಿಸಲಾಯಿತು. |
| ವಿಷಯ ಸಂಖ್ಯೆ–25 | Issue of Legal Notices to the various outside agencies who have been given accommodation in Central College Campus<br><br>ಕುಲಪತಿಗಳು, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಸೆಂಟ್ರಲ್ ಕಾಲೇಜು ಆವರಣ ಮತ್ತು ಪ್ರಸನ್ನಕುಮಾರ ಬ್ಲಾಕ್ ನಲ್ಲಿ ವಿವಿಧ ಸಂಘ ಸಂಸ್ಥೆಗಳಿಗೆ ಲೀಸ್ ಆಧಾರದ ಮೇಲೆ ಕಟ್ಟಡಗಳನ್ನು ನೀಡಿರುವ ಕುರಿತು ಹಾಗೂ ಆ ಕಟ್ಟಡಗಳಲ್ಲಿ ಸದರಿ ಸಂಘ / ಸಂಸ್ಥೆಗಳು ಸುಮಾರು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದು ಸದ್ಯ ಈ ಕಟ್ಟಡಗಳು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಅಗತ್ಯವಾಗಿರುವುದರಿಂದ ತಿಳಿಸಿ ತೆರವು ಮಾಡಲು ಕಾನೂನು ಸೂಚನಾ ಪತ್ರವನ್ನು (Legal Notice) ಸದರಿ ಸಂಘ/ಸಂಸ್ಥಗಳಿಗೆ ನೀಡಿರುವುದಾಗಿ ತಿಳಿಸಿದರು. ಸಂಘ / ಸಂಸ್ಥೆಗಳು ತೆರವು ಮಾಡುವ ಕುರಿತು ಯಾವುದೇ ನಿಖರವಾದ ಅಭಿಪ್ರಾಯ ನೀಡಿರುವುದಿಲ್ಲ. ಈ ಕಾರಣಗಳಿಂದಾಗಿ ಪ್ರಸ್ತಾವನೆಯಲ್ಲಿ ತಿಳಿಸಿದ ಎಲ್ಲಾ ಸಂಘ / ಸಂಸ್ಥೆಗಳ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿ ಕಟ್ಟಡಗಳನ್ನು ತೆರವುಗೊಳಿಸಲು ಕ್ರಮ ಕೈಕೊಳ್ಳಬೇಕಾಗಿದೆ, ಇದಲ್ಲದೆ ಇನ್ನು ಕೆಲವು |

| | |
|---|---|
| | ಸಂಸ್ಥೆಗಳು ಸೆಂಟ್ರಲ್ ಕಾಲೇಜಿನ ಕಟ್ಟಡ ಹಾಗೂ ಜಮೀನುಗಳನ್ನು ಪಡೆಯಲು ಪ್ರಯತ್ನಿಸುತ್ತಿರುವುದು ತಿಳಿದು ಬಂದಿದೆ ಎಂದು ತಿಳಿಸಿದರು.<br><br>ಡಾ: ನರಸಿಂಹಮೂರ್ತಿಯವರು ನ್ಯಾಯಾಲಯದಲ್ಲಿ ಪ್ರಕರಣಗಳ ನಿರ್ಧಾರವಾಗಲು ಸಾಕಷ್ಟು ಸಮಯ ತಗಲುತ್ತದೆ ಎಂದು ತಿಳಿಸಿದರು. ಡಾ: ಅರವಿಂದ ರವರು ಗುತ್ತಿಗೆ(ಲೀಸ್) ಅವಧಿಯಲ್ಲಿ ಕೇಸ್ ದಾಖಲು ಮಾಡಲು ಬರುವದಿಲ್ಲವೆಂದು ತಿಳಿಸಿದರು.<br><br>ಸಿಂಡಿಕೇಟ್ ನಿರ್ಣಯ:<br><br>ವಿಶ್ವವಿದ್ಯಾಲಯ ಕೈಕೊಂಡ ಕ್ರಮಕ್ಕೆ ಸಿಂಡಿಕೇಟ್ ಅನುಮೊದನೆ ನೀಡಿತು. ಈ ಕುರಿತು ಅಗತ್ಯವಾದ ಕಾನೂನು ಕ್ರಮಗಳನ್ನು ಕೈಕೊಳ್ಳಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು. |
| ಸಾಮಾನ್ಯ ವಿಷಯಗಳ ಚರ್ಚೆ:1 | ಪ್ರಾಂಶುಪಾಲರು ಆದ ಡಾ: ಎಸ್. ಹರೀಶ್ ರವರು ಹೊಸ ಮಹಾವಿದ್ಯಾಲಯಗಳ ಸಂಯೋಜಿನೆ, ಹೊಸ ವಿಷಯಗಳ ಅನುಮತಿ ಹೆಚ್ಚುವರಿ ಪ್ರವೇಶ ಸಂಖ್ಯೆ ಮತ್ತು ಶಾಶ್ವತ ಸಂಯೋಜನೆ ನವೀಕರಣಗಳ ಪ್ರಸ್ತಾವನೆಗಳನ್ನಯ ಸರ್ಕಾರಕ್ಕೆ ಸಲ್ಲಿಸಲಾಗಿದ್ದು ಇದುವರೆಗೆ ಸರ್ಕಾರದಿಂದ ಅನುಮೋದನೆ ಬಂದಿರುವುದಿಲ್ಲವೆಂದು ತಿಳಿಸಿದರು. ನವಂಬರ್ ತಿಂಗಳಲ್ಲಿ ಪರೀಕ್ಷೆಗಳು ಪ್ರಾರಂಭವಾಗಲಿದ್ದು, ಮಹಾವಿದ್ಯಾಲಯ ಹಾಗೂ ವಿದ್ಯಾರ್ಥಿಗಳು ಆತಂಕದಲ್ಲಿದ್ದಾರೆ ತಿಳಿಸಿದರು.<br><br>ಕುಲಪತಿಗಳು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು ಹಲವು ಬಾರಿ ಸಂಬಂಧಿಸಿದ ಅಧಿಕಾರಿಗೊಳೊಂದಿಗೆ ಚರ್ಚಿಸಿರುವುದಾಗಿ ತಿಳಿಸಿದರು. ಶಾಶ್ವತ ಸಂಯೋಜನೆ ನವೀಕರಣದಲ್ಲಿ ಯಾವುದೇ ಹೊಸ ವಿಷಯ ಅಥವಾ ಹೆಚ್ಚುವರಿ ಪ್ರವೇಶ ಸಂಖ್ಯೆಯ ಪ್ರಸ್ತಾಪ ಇಲ್ಲದಿರುವುದರಿಂದ ಸರ್ಕಾರದ ಅನುಮೋದನೆ ನಿರೀಕ್ಷಿಸಿ ಆಯಾಯ ಮಹಾವಿದ್ಯಾಲಯಗಳು ಮಾಡಿಕೊಂಡಿರುವ ಪ್ರವೇಶಗಳನ್ನು ಅನುಮೋದಿಸಲು ಕ್ರಮ ಕೈಕೊಳ್ಳಬಹುದಾಗಿದೆ ಉಳಿದಂತೆ ಸರ್ಕಾರದ ಅನುಮೋದನೆ ದೊರಕದ ಹೊರತು ಪರಿಗಣಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದರು<br><br>ಸಿಂಡಿಕೇಟ್ ತೀರ್ಮಾನ<br><br>**ವಿಷಯದ ಗಂಭೀರತೆಯನ್ನು ಪರಿಗಣಿಸಿ, ಶಾಶ್ವತ ಸಂಯೋಜನೆ ನವೀಕರಣಕ್ಕೆ ಸಂಬಂಧಿಸಿದಂತೆ ಮಹಾವಿದ್ಯಾಲಯಗಳು ಈಗಾಗಲೇ ಅನುಮೋದನೆ ಗೊಂಡಿರುವ ವಿಷಯ ಹಾಗೂ ಪ್ರವೇಶ ಸಂಖ್ಯೆಯ ಮಿತಿಗೆ ಒಳಪಟ್ಟು ಮಾಡಲಾದ ಪ್ರವೇಶಗಳನ್ನು ಪರಿಶೀಲಿಸಿ ಮಹಾವಿದ್ಯಾಲಯಗಳಿಂದ ಮುಚ್ಚಳಿಕೆ ಪತ್ರ ಪಡೆದು ಅನುಮೋದಿಸಲು ತೀರ್ಮಾನಿಸಲಾಯಿತು.** |
| ಸಾಮಾನ್ಯ ವಿಷಯಗಳ ಚರ್ಚೆ:2 | ಸಭೆಯ ಪ್ರರಂಭದಲ್ಲಿ ಕುಲಪತಿಗಳು ಅನುಮತಿಸಿದಂತೆ ಶ್ರೀ ಹೆಚ್.ಆರ್. ಸತೀಶ್ ಹಾಗೂ ಡಾ. ಅರವಿಂದ್ ರವರಿಗೆ ವಿಷಯ ಪ್ರಸ್ತಾಪಿಸಲು ತಿಳಿಸಿದರು. ಅದರಂತೆ ಸದಸ್ಯರು ವಿಶ್ವವಿದ್ಯಾಲಯದ ಸೆನೆಟ್ ಹಾಲ್‌ನ್ನು "Secular Teachers Forum" ಎಂಬ ಸಂಸ್ಥೆಗೆ ಕಾರ್ಯಕ್ರಮ ನಡೆಸಲು ಅನುಮತಿ ನೀಡಿರುವ ಕುರಿತು ವಿವರಗಳನ್ನು ಸಭೆಯಲ್ಲಿ ಮಂಡಿಸಲು ಕೋರಲಾಗಿತ್ತು ಎಂದು ತಿಳಿಸಿದರು ಅಂದು ಜರುಗಿದ ಕಾರ್ಯಕ್ರಮದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಮಾತನಾಡಿದ್ದು, ಆಹ್ವಾನ ಪತ್ರಿಕೆಯಲ್ಲಿ ವಿಶ್ವವಿದ್ಯಾಲಯದ ಅಧಿಕಾರಿಗಳ |

| | |
|---|---|
| | ಹೆಸರುಗಳನ್ನು ಮುದ್ರಿಸಿರುತ್ತಾರೆ. ಇಂತಹ ಸಂಸ್ಥೆಗಳಿಗೆ ಅನುಮತಿ ನೀಡಿರುವ ಕುರಿತು ಮಾಹಿತಿ ನೀಡಲು ತಿಳಿಸಿದರು.<br><br>ಕುಲಸಚಿವರು ವಿವರಣೆ ನೀಡುತ್ತಾ, ಬೆಂಗಳೂರು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಡಾ. ಸುಂದರ್‌ರಾಜ್ ಅರಸುರವರು, ತಮ್ಮನ್ನು ಭೇಟಿ ಮಾಡಿ, ತಮ್ಮ ಶಿಕ್ಷಕರ ಸಂಘದ ಸಭೆ ನಡೆಸಲು 2 ಗಂಟೆಗಳ ಅವಧಿಗೆ ಸೆನೆಟ್ ಹಾಲ್ ಕೇಳಿರುವುದನ್ನು ಪರಿಗಣಿಸಿ, ಸಭೆ ಜರುಗಿಸಲು ಮೌಖಿಕ ಅನುಮತಿ ನೀಡಲಾಗಿದೆ ಎಂದು ತಿಳಿಸಿದರು. ಅವರು ಅಧಿಕಾರಿಗಳ ಹೆಸರನ್ನು ತಮ್ಮ ಗಮನಕ್ಕೆ ತಾರದೇ ಮುದ್ರಿಸಿದ್ದಾರೆ. ಇನ್ನು ಮುಂದೆ ಇಂಥಹ ಘಟನೆಗಳು ಮರುಕಳಿಸದಂತೆ ಕ್ರಮ ಕೈಕೊಳ್ಳುವುದಾಗಿ ತಿಳಿಸಿದರು. |
| ಸಾಮಾನ್ಯ ವಿಷಯಗಳ ಚರ್ಚೆ:3 | ಬೆಂಗಳೂರು ಮಿರರ್ ಪತ್ರಿಕೆಯಲ್ಲಿ ಪ್ರಕಟವಾದ ವಿಷಯ ಕುರಿತು ಸದಸ್ಯರಾದ ಶ್ರೀ ಹೆಚ್.ಆರ್. ಸತೀಶ್ ಹಾಗೂ ಡಾ. ಅರವಿಂದ್ ರವರು ಪ್ರಸ್ತಾಪಿಸಲು, ಕುಲಸಚಿವರು (ಮೌಲ್ಯಮಾಪನ)ರವರು ಈ ಕುರಿತು ವಿವರವಾದ ಮಾಹಿತಿ ನೀಡುವರೆಂದು ಕುಲಪತಿಗಳು ತಿಳಿಸಿದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಮಾನ್ಯ ಸದಸ್ಯರು ತಾವು ಈ ವಿಷಯ ಕುರಿತು ಚರ್ಚಿಸಲು ಪ್ರಸ್ತಾವನೆ ನಿಗದಿತ ದಿನಾಂಕದೊಳಗೆ ಸಲ್ಲಿಸಿರುವುದರಿಂದ ಇದನ್ನು ಅಜಂಡಾದಲ್ಲಿ ಸೇರಿಸ ಬೇಕಾಗಿತ್ತು ಎಂದು ತಿಳಿಸಿ ಚರ್ಚೆಗೆ ಒತ್ತಾಯಿಸಿದರು ಕುಲಪತಿಗಳು ಪತ್ರಿಕೆಯಲ್ಲಿ ಪ್ರಕಟವಾದ ವರದಿಯಲ್ಲಿ ಒಳಗೊಂಡ ಅಂಶಗಳ ಕುರಿತು ಈಗಗಾಲೇ ಚರ್ಚೆಗಳಾಗಿದ್ದು ಈ ಕುರಿತು ಸದಸ್ಯರಿಗೆ ಲಿಖಿತವಾದ ವಿವರಗಳನ್ನು ಒದಗಿಸಲಾಯಿತು ಹೆಚ್ಚಿನ ಚರ್ಚೆ ಅಗತ್ಯವೆನಿಸಿದಲ್ಲಿ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಪ್ರಸ್ತಾವನೆ ಮಂಡಿಸಬಹುದೆಂದು ಮಾನ್ಯ ಸದಸ್ಯರಿಗೆ ತಿಳಿಸಲಾಯಿತು |
| ಸಾಮಾನ್ಯ ವಿಷಯಗಳ ಚರ್ಚೆ:4 | ಸದಸ್ಯರಾದ ಡಾ: ನರಸಿಂಹಮೂರ್ತಿಯವರು UVCE ಬಗ್ಗೆ ವಿವರಗಳನ್ನು ತಿಳಿಯಲು ಬಯಸಿದರು. ಕುಲಪತಿಗಳು ವಿವರಣೆ ನೀಡುತ್ತಾ, ಗೆಝೆಟ್ ಪ್ರಕಟಣೆಯ ಪ್ರಕಾರ ವಿಶ್ವವಿದ್ಯಾಲಯ ಭೌಗೋಳಿಕ ವ್ಯಾಪ್ತಿಯಲ್ಲಿ UVCE ಬರುತ್ತದೆ. ಈ ಕುರಿತು ಸರ್ಕಾರದೊಂದಿಗೆ ಹಲವಾರು ಪತ್ರ ವ್ಯವಹಾರ ಮಾಡಲಾಗಿದೆ. ಅಂತಿಮವಾಗಿ ಸರ್ಕಾರ, ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷರು ಕರ್ನಾಟಕ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಎಸ್.ವಿ. ರಂಗನಾಥ ರವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದ್ದು, ಸದರಿ ಸಮಿತಿ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ವರದಿಯ ಶಿಫಾರಸ್ಸಿನಂತೆ, UVCE ಹಾಗೂ ಅಲ್ಲಿರುವ ವಿಭಾಗಗಳು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯಕ್ಕೆ ಸೇರಬೇಕಾಗಿದೆ. ಈ ಕುರಿತು ಸರ್ಕಾರ ಕ್ರಮ ಕೈಕೊಳ್ಳಬೇಕಾಗಿದೆ ಎಂದು ತಿಳಿಸಿದರು. |
| ಸಾಮಾನ್ಯ ವಿಷಯಗಳ ಚರ್ಚೆ–5 | ಶ್ರೀ ಹೆಚ್. ಆರ್. ಸತೀಶ್ ರವರು ವಿಶ್ವವಿದ್ಯಾಲಯದ ಕ್ರಿಕೆಟ್ ಹಾಗೂ ಇತರ ಮೈದಾನಗಳನ್ನು ಕೆಲವು ಸಂಸ್ಥೆಗಳು ಬಾಡಿಗೆ ಪಡೆದು ತರಬೇತಿಗೆ ಬರುವ ಕ್ರೀಡಾ ಪಟುಗಳಿಂದ ಹೆಚ್ಚಿನ ಹಣ ಪಡೆಯುತ್ತಿರುವುದಾಗಿ ತಿಳಿಸಿದರು. ಕುಲಪತಿಗಳು ಈ ಕುರಿತು ವಿವರಣೆ ನೀಡಿ, ಅಗತ್ಯ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುವುದಾಗಿ ತಿಳಿಸಿದರು. |
| ಸಾಮಾನ್ಯ ಚರ್ಚೆ 6 | ಕುಲಸಚಿವರು (ಮೌಲ್ಯಮಾಪನ) ಪ್ರಸ್ತಾಪಿಸಿದ ವಿಷಯಗಳಿಗೆ ವಾಣಿಜ್ಯ ಸ್ನಾತಕೋತ್ತರ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಡಾ. ಎಂ. ಮುನಿನಾರಾಯಣಪ್ಪ ರವರನ್ನು BOE ಅಧ್ಯಕ್ಷರಾಗಿ ನೇಮಕ ಮಾಡಬೇಕೆಂದು ಸಭೆ ನಿರ್ಣಯಿಸಿತು. |
| ಸಾಮಾನ್ಯ ಚರ್ಚೆ 7 | ಕುಸಚಿವರು (ಮೌಲ್ಯಮಾಪನ) ರವರು ಈಗಾಗಲೇ BOAEಗಳು ಸಭೆ ಸೇರಿ ಆಯಾಯ ವಿಷಯಗಳಿಗಾಗಿ BOEಗಳನ್ನು ರಚಿಸಲು ಶಿಫಾರಸ್ಸುಗಳನ್ನು ಮಾಡಲಾಗಿದೆ. ಸಮಯದ ಅಭಾವ ಹಾಗೂ ಪರೀಕ್ಷೆಗಳು ಹತ್ತಿರ ಬರುತ್ತಿರುವುದರಿಂದ BOAE ಶಿಫಾರಸ್ಸು ಮಾಡಿದ BOEಗಳನ್ನು |

| | |
|---|---|
| | ರಚಿಸಲು ಅಗತ್ಯ ಕ್ರಮ ಕೈಕೊಳ್ಳಲು ಸಿಂಡಿಕೇಟ್ ಸಭೆ ಅನುಮತಿ ನೀಡಬೇಕೆಂದು ಕೋರಿದರು.<br>**ಸಿಂಡಿಕೇಟ್ ತೀರ್ಮಾನ**<br>ಪ್ರಸ್ತಾವನೆಗೆ ಅನುಮೋದನೆ ನೀಡಿ ಮುಂದಿನ ಸಭೆಯಲ್ಲಿ ದೃಢಿಕರಣಗಳ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಯಿತು |
| ಸಾಮಾನ್ಯ ಚರ್ಚೆ 8 | ಡಾ. ಎನ್ ನರಸಿಂಹಮೂರ್ತಿಯವರು ಆನ್‌ಲೈನ್ ವೆಬ್ ರೇಡಿಯೋ ಕುರಿತು ಸಭೆಗೆ ವಿವರಿಸಿದರು. |
| ಸಾಮಾನ್ಯ ಚರ್ಚೆ 9 | "Mind Tree" software ಸಂಸ್ಥೆಯ ಅಧಿಕಾರಿಗಳು NSS ವಿದ್ಯಾರ್ಥಿಗಳ ಚಟುವಟಿಕೆಗಳಿಗೆ ಸಂಭಂಧಿಸಿದಂತೆ ಅಭಿವೃದ್ಧಿಪಡಿಸಿದ Appನ್ನು ಸಭೆಗೆ ವಿವರಿಸಿದರು. ಸದಸ್ಯರು ಕೆಲವು ಸುಧಾರಣೆಗಳ ಬಗ್ಗೆ ಸಂಸ್ಥೆಯ ಅಧಿಕಾರಿಗಳೊಂದಿಗೆ ಚರ್ಚಿಸಿ ಸಲಹೆ ನೀಡಿದರು. ಸಭೆ App ನಲ್ಲಿರುವ ಅಂಶಗಳ ಉಪಯುಕ್ತತೆ ಕುರಿತು ಮೆಚ್ಚಿಗೆ ವ್ಯಕ್ತಪಡಿಸಿತು ಹಾಗೂ ಈ ಕುರಿತು ಕುಲಪತಿಗಳು ಅಗತ್ಯ ವಿಧಿವಿಧಾನಗಳನ್ನು ರೂಪಿಸಲು ಕ್ರಮ ಕೈಕೊಳ್ಳಬೇಕೆಂದು ಸಭೆ ತೀರ್ಮಾನಿಸಿತು. |
| | ಸಿಂಡಿಕೇಟ್ ಸದಸ್ಯರಾಗಿ ಒಂದು ವರ್ಷದ ಅವಧಿ ಪೂರೈಸುತ್ತಿರುವ ಪ್ರಿನ್ಸಿಪಾಲರುಗಳಾದ 1. ಡಾ: ಶಾಂತಿ ರಾಜೇಂದ್ರ ಕುಮಾರ್, 2. ಡಾ: ಎಸ್. ಹರೀಶ್, 3. ಡಾ: ಆಶಾ ಗಣೇಶ್, ಹಾಗೂ 4. ಡಾ: ಲತಾಕುಮಾರಿ ಇವರುಗಳನ್ನು ಕುಲಪತಿಗಳು ಅಭಿನಂದಿಸಿ ಸನ್ಮಾನಿಸಿದರು. ಅವರು ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ ಸಹಕರಿಸಿರುವುದಕ್ಕೆ ಧನ್ಯವಾದಗಳನ್ನು ಅರ್ಪಿಸಿದರು.<br>ಸಭೆಯ ಅಂತ್ಯದಲ್ಲಿ ಕುಲಸಚಿವರು ಎಲ್ಲಾ ಸದಸ್ಯರ ಸಹಕಾರಕ್ಕೆ ಹಾಗೂ ವಿಶೇಷವಾಗಿ ನಾಲ್ಕು ಪ್ರಿನ್ಸಿಪಾಲರು ನೀಡಿದ ಸಹಾಯ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿದರು. |

ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಸಹಿ/-
**ಕುಲಸಚಿವರು**

ಸಹಿ/-
**ಕುಲಪತಿಗಳು**

ಕುಲಸಚಿವರು 30/10/17
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ